ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೬ ಏಪ್ರಿಲ್ -೨೦೧೬ ಸಂಚಿಕೆ - ೯

ವಿಶ್ವವಿದ್ಯಾಲಯಗಳ ಪದವಿಗಳು ಕಾಮಧೇನುಗಳಲ್ಲ

****

ಬ್ಯಾಂಕುಗಳು ನಷ್ಟದಲ್ಲಿ ಏಕೆ ಇವೆ?

****

ಕನ್ಹಯ್ಯಕುಮಾರರ ಚರ್ಚಿತ ಭಾಷಣ

****

ಹಳೆ ಮತ್ತು ಹೊಸ ವಿಚಾರಗಳ ಸಮನ್ವಯಕಾರ ಬನ್ನಂಜೆ

ಜನಪದ ವಿಚಾರದಲ್ಲಿ

ಏಪ್ರಿಲ್ - ೨೦೧೬

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಏಪ್ರಿಲ್ - ೨೦೧೬
ಸಂಪುಟ - ೧೬
ಸಂಚಿಕೆ - ೯

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.org

ಬೆಳಕಿನ ಕಡೆ......

ಬೆಳಕಿನ ಕಡೆ ಮುಖ ಮಾಡೋಣ
ಕತ್ತಲೊಡನೆ ಸೆಣಸಾಡೋಣ

ದೂರವಿದ್ದವರ ಹತ್ತಿರ ಸೆಳೆದು
ಸ್ನೇಹದ ಬೀಜವ ಬಿತ್ತೋಣ
ಮಾನವ ಲೋಕದ ಕ್ಷಿತಜವ ಮೀರಿ
ಎತ್ತರ ಶಿಖರವ ಹತ್ತೋಣ

ಸ್ವಾರ್ಥ ದುರಾಸೆಯ ಭಾರಿ ಬಲೂನಿಗೆ
ಮಾನವತೆಯ ಮೊನೆ ಚುಚ್ಚೋಣ
ನಾಳೆಯೆ ಇಲ್ಲದ ಕಣ್ಣುಗಳಲ್ಲಿ
ಕನಸಿನ ದೀಪವ ಹಚ್ಚೋಣ

ಎದೆ ಎದೆ ನಡುವಿನ ಕದಗಳ ತೆರೆದು
ಹೃದಯ ಸಂವಾದವ ನಡೆಸೋಣ
ಬದುಕಿನ ಬಯಲಲಿ ಬೀಳುವ ಕಸವನು
ಸದಾಕಾಲವು ಗುಡಿಸೋಣ

ಹಸಿದಿಹ ಒಡಲಿಗೆ ತುತ್ತನು ನೀಡಿ
ಸುರಿವ ಕಂಬನಿಯ ಒರೆಸೋಣ
ಬೆಳೆವ ಸಸಿಗಳಿಗೆ ನೀರನ್ನೆರೆದು
ಶುಭದ ಮಾತಿನಲಿ ಹರಸೋಣ

ಅನಾಮದೆಯ

ವಿಶ್ವವಿದ್ಯಾಲಯ ಪದವಿಗಳು ಕಾಮಧೇನುಗಳಲ್ಲ

-ಸುರೇಂದ್ರ ಕೌಲಗಿ

ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯ. ಪ್ರತಿಷ್ಠಿತ ಏಕೆಂದರೆ ಅಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಬೋಧಕರಿಗೆ ವಿಚಾರಮಂಥನ ಮಾಡಲು ಮುಕ್ತ ಅವಕಾಶವಿದೆಯೆಂಬ ಕಾರಣಕ್ಕಾಗಿ. ಆ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಲ್ಲನೇಕರು ದೇಶದ ಆಡಳಿತ ವ್ಯವಸ್ಥೆಯಲ್ಲಿ ಮತ್ತು ಜೀವನದ ವಿವಿಧ ಕ್ಷೇತ್ರಗಳಲ್ಲಿ ಒಳ್ಳೆಯ ಸ್ಥಾನಗಳನ್ನು ಪಡೆದಿದ್ದಾರೆ ಮತ್ತು ನೇತಾರರಾಗಿದ್ದಾರೆ. ಇತರ ವಿಶ್ವವಿದ್ಯಾಲಯಗಳಲ್ಲೂ ಮುಕ್ತ ವಾತಾವರಣವಿದೆ. ಆದರೆ ಇತ್ತೀಚೆಗೆ ಹೈದರಾಬಾದ ಮತ್ತು ಜೆ.ಎನ್.ಯು. ವಿಶ್ವವಿದ್ಯಾಲಯಗಳಲ್ಲಿ ಸಂಭವಿಸಿದ ಅಹಿತಕರ ಘಟನೆಗಳಿಂದಾಗಿ ಈಗ ಅವು ಜಗತ್ತಿನಾದ್ಯಂತ ಅನೇಕ ಬಗೆಯ ವಿಮರ್ಶೆಗಳಿಗೆ ಹಾಗೂ ಟೀಕೆ ಟಿಪ್ಪಣಿಗಳಿಗೆ ಒಳಗಾಗಿವೆ. ಅಲ್ಲಿ ಘಟಿಸಿದ ಘಟನೆಗಳ ಬಗ್ಗೆ ಇರಬಹುದಾದ ಸತ್ಯಾಂಶ ಸಾಮಾನ್ಯ ಜನಕ್ಕೆ ಗೊತ್ತಿಲ್ಲ. ಅಲ್ಲಿಂದ ಹೊರ ಬೀಳುವ ಸಂಗತಿಗಳಿಗೆ ಎಡ ಇಲ್ಲವೆ ಬಲ ಪಂಥೀಯ ವಿಚಾರದ ಅಥವಾ ಪ್ರಭುತ್ವದ ವಿಚಾರದ ಲೇಪನ ಇರುತ್ತದೆ. ಇದರಿಂದಾಗಿ ಸತ್ಯ ಯಾವುದು ಎಂಬುದು ಗೊತ್ತಾಗುವುದು ಕಷ್ಟವೆನಿಸುತ್ತದೆ. ಮಾಧ್ಯಮದಲ್ಲಿ ಬರುವ ಸಂಗತಿಗಳು ವರ್ಣ ರಂಜಿತವಾಗಿರುತ್ತವಾದ್ದರಿಂದ ಸತ್ಯ ಇನ್ನೂ ಬಹಳ ದೂರವಾಗಿಯೇ ಉಳಿಯುತ್ತದೆ. ಏಕೆಂದರೆ ಸತ್ಯದ ಅಭಿವ್ಯಕ್ತಿ ಒಂದೇ ರೀತಿಯಲ್ಲಿ ಇರುವುದಿಲ್ಲವಾದರಿಂದ ವಿಶ್ವವಿದ್ಯಾಲಯಗಳ ಪರಿಸರದಲ್ಲಿ ನಡೆಯುವ ಖಂಡನ-ಮಂಡನವಾಗಲೀ, ವಿಚಾರ ಮಂಥನವಾಗಲೀ, ಶಾಂತವಾದ ತೀರ್ಮಾನಕ್ಕೆ ಬರಲು ಸಹಾಯಕವಾಗುವುದರ ಬದಲು ಅಶಾಂತಿಗೆ ಮತ್ತು ಹಿಂಸೆಗೆ ಕಾರಣವಾಗುತ್ತಿದೆ. ಭಿನ್ನಮತೀಯ ಎದುರಾಳಿಗಳನ್ನು ವೈಚಾರಿಕವಾಗಿ ಗೆಲ್ಲುವ ಸಾಧನೆಯಲ್ಲಿಯೇ ವಿಚಾರಮಂಥನದ ಸಾರ್ಥಕ್ಯವಿದೆ. ಅಂದರೆ ಮಂಥನದ ನಂತರ ಸುಯೋಗ್ಯ ಮತ್ತು ಸಮಂಜಸವಾದ ಅಭಿಪ್ರಾಯಕ್ಕೆ ಬಂದಮೇಲೆ ಮಂಥನ ನಡೆಸಿದ ಎರಡೂ ಪಕ್ಷಗಳು ವಿರಸ ಮರೆತು ಸಮರಸತೆ ಸಾಧಿಸುವಂತಾದಾಗಲೇ ಮುಕ್ತ ವಿಚಾರಗಳ ಅಭಿವ್ಯಕ್ತಿಯ ಸ್ವಾತಂತ್ರ್ಯಕ್ಕೂ ಸಂವಾದಕ್ಕೂ ಶೈಕ್ಷಣಿಕ ಮೌಲ್ಯ ಬರುತ್ತದೆ, ವಿಶ್ವವಿದ್ಯಾಲಯಗಳ ಪ್ರತಿಷ್ಠೆ ಹೆಚ್ಚಾಗುತ್ತದೆ. ಆದರೆ ಇಂದಿನ ದಿನಗಳಲ್ಲಿ ಹಾಗಾಗದೆ ಸಂವಾದಗಳು, ವಿಚಾರಗೋಷ್ಠಿಗಳು ಪರಸ್ಪರರ ವಿರುದ್ಧ ಹಾಲಾಹಲಕಾರುವ ಸಂದರ್ಭಗಳಾಗುತ್ತಲಿವೆ. ವಿಶ್ವವಿದ್ಯಾಲಯಗಳಲ್ಲಿ ನಡೆಯುವ ಗೋಷ್ಠಿಗಳನ್ನು ಸಾಮಾನ್ಯವಾಗಿ ತಮಗಿರುವ ಹಕ್ಕುಗಳ ಪ್ರತಿಪಾದನೆ ಮತ್ತು ಪ್ರದರ್ಶನಗಳಿಗೆ ಉಪಯೋಗಿಸಿಕೊಳ್ಳಲಾಗುತ್ತಿದೆಯೇ ಹೊರತು ನಿರ್ದಿಷ್ಟ

ಸಂದರ್ಭದಲ್ಲಿ ತಮ್ಮ ಕರ್ತವ್ಯಗಳೇನು ಎಂಬುದರ ಬಗ್ಗೆಯಾಗಲೀ, ಕರ್ತವ್ಯಗಳ ಕಟ್ಟುನಿಟ್ಟಿನ ಪಾಲನೆಯ ಬಗ್ಗೆಯಾಗಲೀ ಚಿಂತನೆ ಮಾಡಲು ಉಪಯೋಗಿಸಿಕೊಳ್ಳುವುದಿಲ್ಲ. ಈ ಕಾರಣದಿಂದಾಗಿಯೇ ವಿಶ್ವವಿದ್ಯಾಲಯಗಳಿಂದ ಹೊರ ಬೀಳುವ ಸಂದೇಶ ಸಮಾಜವನ್ನು ಒಡೆಯಲು ಕಾರಣವಾಗುತ್ತಿದೆಯೇ ಹೊರತು ಕೂಡಿಡಲು ಅಲ್ಲ. ಆದ್ದರಿಂದ ಈಗ ದೇಶಾಭಿಮಾನ ಮತ್ತು ಧರ್ಮಾಭಿಮಾನದ ಹೆಸರಿನಲ್ಲಿ ಉನ್ಮಾದ ಹಬ್ಬುತ್ತಿದೆಯೇ ವಿನಃ ಉತ್ಸಾಹ ಪಡಮೂಡುತ್ತಿಲ್ಲ. ಜೆ.ಎನ್.ಯು ದಲ್ಲಿ ಆದದ್ದು ಇಂಥ ಪ್ರಮಾದವೇ, ಎಷ್ಟೇ ವೈಚಾರಿಕ ಭಿನ್ನಾಭಿಪ್ರಾಯಗಳಿದ್ದರೂ ಅದರ ಪರಿಹಾರ ಅಹಿಂಸಾತ್ಮಕ ವಿಧಾನಗಳಿಂದ ಆಗಬೇಕೇ ವಿನಃ ಹಿಂಸಾತ್ಮಕ ವಿಧಾನಗಳಿಂದಲ್ಲ. ಪಿತೂರಿಯ ಕ್ರಮದಿಂದಂತಲು ಅಲ್ಲವೇ ಅಲ್ಲ, ಅಹಿಂಸಾತ್ಮಕ ವಿಧಾನದ ಸತ್ಪರಿಣಾಮವನ್ನು ಗಾಂಧೀಜಿ ನಮಗೆ ತೋರಿದ್ದಾರೆ.

ದೇಶದ ವಿಶ್ವವಿದ್ಯಾಲಯಗಳು ಮತ್ತು ಉನ್ನತ ವ್ಯಾಸಂಗದ ಸಂಸ್ಥೆಗಳು ಶ್ರೀಸಾಮಾನ್ಯರ ಜೀವನದ ವಸ್ತುಸ್ಥಿತಿಯಿಂದ ದೂರ ಆಗಿರುತ್ತವೆ. ಅವು ಅವರ ಪಾಲಿಗೆ ಗಗನ ಕುಸುಮಗಳಾಗಿವೆ. ವಿಶ್ವವಿದ್ಯಾಲಯಗಳಿಂದ ಪಿ.ಎಚ್.ಡಿ. ಪಡೆದು ಹೊರಬಂದ ಜಾಣರಿಂದ ಸಾಮಾನ್ಯ ಸಮಾಜಕ್ಕೆ ಯಾವ ರೀತಿ ಲಾಭವಾಗಿದೆಂಬುದು ಇದುವರೆಗೆ ಯಾವುದೇ ಸಮೀಕ್ಷೆಗೂ ಒಳಪಟ್ಟಿಲ್ಲ. ಪಿ.ಎಚ್.ಡಿ ಪಡೆದ ವ್ಯಕ್ತಿಗಳಿಗೆ ಸಮಾಜದಲ್ಲಿ ಯಾವುದಾದರೊಂದು ಪ್ರಕಾರದ ಪ್ರತಿಷ್ಠಿತ ಸ್ಥಾನ ಪಡೆಯಲು ಸಾಧ್ಯವಾಗಿರಬಹುದು, ಹೆಚ್ಚು ಧನ ಸಂಪಾದನೆಗೆ ದಾರಿಯಾಗಿರಬಹುದು ಆದರೆ ಸಮಾಜಕ್ಕೆ ತೃಣಮಾತ್ರವೂ ಸಹಾಯವಾಗಿದೆಂದು ಅನಿಸುವುದಿಲ್ಲ. ಈ ಮಾತಿಗೆ ಕೆಲವು ಅಪವಾದಗಳಿರಬಹುದು. ಆದರೆ ಇದು ಸತ್ಯ. ಇಂದಿನ ಸಮಾಜದಲ್ಲಿ ಸಂಭವಿಸುತ್ತಿರುವ ನಡವಳಿಕೆಗಳನ್ನು ಗಮನಿಸಿದಾಗ ಸಮಾಜವು ಒಂದು ಅಂಗುಲದಷ್ಟೂ ನೈತಿಕತೆಯ ಕಡೆಗೆ, ಸಭ್ಯತೆಯ ಕಡೆಗೆ ಚಲಿಸಿದಂತೆ ಅನಿಸುವುದಿಲ್ಲ. ಬದಲಿಗೆ ಕಾಲಕಳೆದಂತೆ ಸಮಾಜ ನೈತಿಕವಾಗಿ ಅವನತಿ ಹೊಂದುತ್ತಿದೆಯೆಂದು ಸ್ಪಷ್ಟವಾಗಿ ಅನುಭವಕ್ಕೆ ಬರುತ್ತಿದೆ. ಹೀಗೆ ಹೇಳುವಾಗಲೆ 'ನೈತಿಕತೆ' ಎಂದರೇನು ಎಂಬ ಬಗ್ಗೆಯೇ ಭಿನಾಭಿಪ್ರಾಯಗಳ ತಿಕ್ಕಾಟ ಪ್ರಾರಂಭವಾಗಿ ಸರಿಯಾದ ಮತ್ತು ನಿಖರವಾದ ತೀರ್ಮಾನಕ್ಕೆ ಬರರಾಗದೆ ಸ್ವೈರಾಚಾರ ಪ್ರಾರಂಭವಾಗುತ್ತದೆ. ಇದೇ ರೀತಿ ಧರ್ಮ, ರಾಷ್ಟ್ರ, ರಾಷ್ಟ್ರೀಯತೆ ಎಂಬ ವಿಷಯಗಳೂ ಸಹ ಅವುಗಳ ವೈಚಾರಿಕ ವ್ಯಾಖ್ಯೆಗಳ ತಾಕಲಾಟದಿಂದ ಸಮಾಜದಲ್ಲಿ ಕ್ಷೋಭೆ ಉಂಟಾಗುತ್ತದೆ.

ಸ್ವಾತಂತ್ರ್ಯ ಬಂದು ಏಳು ದಶಕಗಳಾದರೂ, ದೇಶದಲ್ಲಿ ೨೦೦ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳ ಸ್ಥಾಪನೆಯಾದರೂ ಅಕ್ಷರಸ್ಥರ ಹಾಗೂ ಪದವೀಧರರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದ್ದರೂ ಸಮಾಜದಲ್ಲಿ ಶಾಂತಿ ಮತ್ತು ನೆಮ್ಮದಿ ಏಕೆ ಇಲ್ಲವಾಗಿವೆ? ಪರಿಸರದ ಹಾನಿ ಏಕೆ ಆಗುತ್ತಿದೆ? ಅರಣ್ಯ ನಾಶ ಏಕಾಗುತ್ತಿದೆ? ಸಮುದ್ರದ ತೀರ ಆಳದಲ್ಲಿಯೂ, ಆಕಾಶದ ಬಹು ಎತ್ತರದಲ್ಲಿಯೂ, ಶಬ್ದಮಾಲಿನ್ಯ ಏಕೆವುಂಟಾಗಿದೆ? ಭೂಮಿಯ ಮೇಲೆ ತಾಪಮಾನ ಏಕೆ ಹೆಚ್ಚಾಗುತ್ತಿದೆ? ಹೆಣ್ಣು ಭ್ರೂಣಹತ್ಯೆಯ ಸಂಖ್ಯೆ

ಏಕೆ ಹಚ್ಚಾಗುತ್ತಿದೆ? ಮಹಿಳೆಯರ ಮೇಲೆ ಮತ್ತು ಬಾಲಕೀಯರ ಮೇಲೆ ಅತ್ಯಚಾರ ಏಕೆ ಹೆಚ್ಚಾಗುತ್ತಿವೆ, ಭ್ರಷ್ಟಾಚಾರ ಏಕೆ ಇದೆ? ಇಂಥ ಸಾವಿರಾರು ಪ್ರಶ್ನೆಗಳು ಮುಗ್ಧ ಜನರನ್ನು ಕಾಡುತ್ತಿರುವಾಗ ಈ ಪ್ರಶ್ನೆಗಳಿಗೆ ದೇಶದ ಯಾವ ಯಾವ ವಿಶ್ವವಿದ್ಯಾಲಯಗಳು ಎಷ್ಟು ಕೆಲಸಮಾಡಿವೆ ಎಂಬುದು ಯಾರಿಗೂ ಗೊತ್ತಿಲ್ಲ. ಒಂದರ್ಥದಲ್ಲಿ ವಿಶ್ವವಿದ್ಯಾಲಯಗಳು ದಂತಗೋಪುರಗಳಾಗಿವೆ. ಆ ದಂತ ಗೋಪುರಗಳಲ್ಲಿರುವ ಐಷರಾಮಿ ಜೀವನ ನಡೆಸುವ ಪಂಡಿತರಿಗಾಗಿ ದೇಶವು ಕೋಟಿಕೋಟಿ ಹಣವನ್ನು ಖರ್ಚುಮಾಡುತ್ತಿದೆ.

ವಿಶ್ವವಿದ್ಯಾಲಯಗಳ ಪದವಿಗಳು ಕಾಮಧೇನುಗಳಲ್ಲ, ಭೂಮಿಯ ಮೇಲೆ ಬಂದು ದೈಹಿಕ ಶ್ರಮಮಾಡಿ ಬೇವರು ತೊಟ್ಟಿಕ್ಕಿಸಿದರೆ ಮಾತ್ರ ಯೋಗ್ಯಫಲ ದೊರೆಯುತ್ತದೆಂಬುದನ್ನು ವಿಶ್ವವಿದ್ಯಾಲಯಗಳು ಅರಿತಾಗಲೇ ಮಾತ್ರ ಅವು ವಿವಾದದ ಸುಂಟರಗಾಳಿಯ ನೆಲೆಯಾಗದೆ ಮನಸ್ಸಿಗೂ, ಶರೀರಕ್ಕೂ ಮುದ ನೀಡುವ ಮಂದ ಮಾರುತದ ನೆಲೆಯಾಗುವವು.

ಪತ್ರಿಕೆಯ ಒಡೆತನದ ವಿವರ

ನಮೂನೆ iv

ಪ್ರಕಟನೆಯ ಸ್ಥಳ	:	ಮೇಲುಕೋಟೆ
ಮುದ್ರಕರ ಹೆಸರು	:	ಶ್ರೀ.ಬಸವರಾಜು.ಸಿ.
ರಾಷ್ಟ್ರೀಯತೆ	:	ಭಾರತೀಯ
ವಿಳಾಸ	:	ಸಂಖ್ಯೆ. ೧೪೫೫ ಚಂದ್ರಗಿರಿ ಡಾ॥ ರಾಜಕುಮಾರ್,ಬಡಾವಣೆ,ಮಂಡ್ಯ
ಪ್ರಕಾಶಕರ ಹೆಸರು	:	ಸುರೇಂದ್ರ ಕೌಲಗಿ
ರಾಷ್ಟ್ರೀಯತೆ	:	ಭಾರತೀಯ
ವಿಳಾಸ	:	ಜನಪದ ಸೇವಾ ಟ್ರಸ್ಟ್ ಕಲ್ಯಾಣಿ ಬೀದಿ ಮೇಲುಕೋಟೆ ಮಂಡ್ಯ (ಜಿ)
ಸಂಪಾದಕರು	:	ಸುರೇಂದ್ರ ಕೌಲಗಿ
ರಾಷ್ಟ್ರೀಯತೆ	:	ಭಾರತೀಯ
ವಿಳಾಸ	:	ಮೇಲಿನಂತೆ
ಒಡೆತನ ಹೊಂದಿದವರ ಹೆಸರು ಮತ್ತು ವಿಳಾಸ	:	ಜನಪದ ಸೇವಾ ಟ್ರಸ್ಟ್ ಕಲ್ಯಾಣಿ ಬೀದಿ ಮೇಲುಕೋಟೆ ಮಂಡ್ಯ (ಜಿ)

ಮೇಲ್ಕಾಣಿಸಿದ ವಿವರಗಳು ಸತ್ಯ.

ದಿನಾಂಕ:೩೦/೦೪/೨೦೧೬ **ಸುರೇಂದ್ರ ಕೌಲಗಿ**

ಸ್ಥಳ: ಮೇಲುಕೋಟೆ

ಬ್ಯಾಂಕುಗಳು ನಷ್ಟದಲ್ಲಿ ಏಕೆ ಇವೆ ?

-ಕಾರ್ಣಿಕ ಬಹುಗುಣ

ದೇಶದಲ್ಲಿಯ ಸಾರ್ವಜನಿಕ ವಲಯದ ಬ್ಯಾಂಕಗಳು ಆರ್ಥಿಕವಾಗಿ ಮುಗ್ಗಟ್ಟಿನಲ್ಲಿವೆ. ಇದಕ್ಕೆ ಮುಖ್ಯಕಾರಣ ಅನುತ್ಪಾದಕ ಆಸ್ತಿಗಳ ದೊಡ್ಡ ಸಂಗ್ರಹ. ಇದನ್ನು ವಸೂಲಾಗದ ಸಾಲದ ಹೊರೆಯೆಂದೂ ಕರೆಯಬಹುದು. ಕಳೆದ ಫೆಬ್ರವರಿ ತಿಂಗಳಲ್ಲಿ ಒಂದಾದ ಮೇಲೊಂದು ಬ್ಯಾಂಕು ತನ್ನ ಲಾಭದಲ್ಲಿ ಗಣನೀಯ ಇಳಿಕೆಯಾಗಿದೆಂದು ಹೇಳುತ್ತಾ ಬಂತು. ಆಗ ಗಾಬರಿಗೊಂಡ ಭಾರತೀಯ ರಿಸರ್ವ್ ಬ್ಯಾಂಕು ಮತ್ತು ಕೇಂದ್ರ ಹಣಕಾಸಿನ ಇಲಾಖೆ ಹಾಗೂ ಸುಪ್ರೀಂ ಕೋರ್ಟ್ ತಕ್ಷಣ ಕಾರ್ಯಪ್ರವೃತ್ತವಾದವು. ಬ್ಯಾಂಕುಗಳಿಗೆ ಸುಸ್ತಿ ಸಾಲಗಾರರಾಗಿ ಇರುವ ಹೆಸರುಗಳನ್ನು ತನಗೆ ಕೊಡಬೇಕೆಂದು ಸುಪ್ರೀಂ ಕೋರ್ಟ್ ಸರ್ಕಾರಕ್ಕೆ ಆದೇಶಿಸಿತು. ಆ ಆದೇಶದ ಮೇರೆಗೆ ರಿಸರ್ವ್ ಬ್ಯಾಂಕು ಮಾರ್ಚ್ ೨೦೧೭ ರೊಳಗಾಗಿ ಎಲ್ಲ ಬ್ಯಾಂಕುಗಳು ತಮ್ಮ ಆಸ್ತಿ-ಜವಾಬ್ಧಾರಿ ತಃಕ್ತೆಗಳನ್ನು ಸರಿಪಡಿಸಿಕೊಳ್ಳಬೇಕೆಂದು ಸೂಚಿಸಿತು. ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ರಘುರಾಂ ರಾಜನ್ ಪ್ರಕಾರ ಬ್ಯಾಂಕುಗಳ ಹಣಕಾಸಿನ ಈ ದುಸ್ಥಿತಿಯನ್ನು ಸರಿಪಡಿಸಲು ತೀವ್ರ ತರವಾದ ಶಸ್ತ್ರಚಿಕಿತ್ಸೆ ಬೇಕಾಗಿದೆ. ಬ್ಯಾಂಡೆಜು ಕಟ್ಟುವುದರಿಂದ ಸರಿಹೋಗುವುದಿಲ್ಲ ಎಂದು ಹೇಳುತ್ತಾರೆ. ಈ ತುಮುಲದಲ್ಲಿ ಅಡಗಿರುವ ಸಂಗತಿ ಏನೆಂದರೆ ಇಡೀ ದೇಶ ಈ ಬಗ್ಗೆ ಮಾತನಾಡಲು ಪ್ರಾರಂಭಿಸಿದೆ. ಯೋಜನೆಯನ್ನು ತ್ವರಿತವಾಗಿ ಅಂಗೀಕರಿಸುವ ಭರದಲ್ಲಿ ಬ್ಯಾಂಕುಗಳು ಆ ಯೋಜನೆಗಳ ಪರಾಮರ್ಶೆಯಲ್ಲಿ ವಹಿಸಬೇಕಾಗಿದ್ದ ಕಾಳಜಿಯನ್ನು ವಹಿಸಲಿಲ್ಲ. ಅಲ್ಲದೆ, ಆ ಯೋಜನೆಗಳಿಂದ ಪರಿಸರದ ಮೇಲೆ ಮತ್ತು ಸಾಮಾಜಿಕವಾಗಿ ಉಂಟಾಗಬಹುದಾದ ಪರಿಣಾಮಗಳನ್ನು ಗಮನಿಸಿಲ್ಲ. ಇಂಥ ಪ್ರಮಾದಗಳು ನಡೆದದ್ದು ೨೦೧೦ ಮತ್ತು ೨೦೧೫ರ ಮಧ್ಯದಲ್ಲಿ, ತಮಾಷೆ ಏನೆಂದರೆ, ಯೋಜನೆಯನ್ನು ತಯಾರಿಸಿಕೊಟ್ಟ ಕಂಪನಿಗಳು ತೆಗೆದುಕೊಂಡ ಸಾಲವನ್ನು ಹಿಂದಿರಿಗಿಸುವ ವಿಷಯದಲ್ಲಿ ತಪ್ಪು ಮಾಡಲು ಪಾರಂಭಿಸಿದ ಮೇಲೂ ಬ್ಯಾಂಕುಗಳು ಎಚ್ಚೆತ್ತುಕೊಳ್ಳಬೇಕಿತ್ತು. ಆದರೆ ಅವು ಹಾಗೆ ಮಾಡದೆ ಬ್ಯಾಂಕುಗಳು ಕಂಪನಿಗಳ ಸಾಲದ ಮರುಪಾವತಿಯ ವಿಧಾನವನ್ನು ಪುನರಚಿಸಿ ಮತ್ತೆ-ಮತ್ತೆ ಸಾಲಗಳನ್ನು ಕೊಡುತ್ತಾಹೋದವು. ಅನುತ್ಪಾದಕ ಆಸ್ತಿಗಳ ಮೆಲೆ ಕೊಡಲಾದ ಸಾಲದ ಸರಾಸರಿಯನ್ನು

ಅಂದಾಜಿಸುವದು ಕಷ್ಟ, ಏಕೆಂದರೆ ಆ ಯೋಜನೆಗಳಲ್ಲು ಸಾಮಾಜಿಕ ವಿಷಯಗಳ ಸಂಘರ್ಷದಲ್ಲಿ ಸಿಕ್ಕೆಹಾಕಿಕೊಂಡಿರುವುದರಿಂದ ಅಂದಾಜಿಸುವದು ಕಷ್ಟ. ಈ ಸಂಘರ್ಷಗಳ ಕಾರಣಗಳಿಂದಾಗಿಯೇ ಬ್ಯಾಂಕುಗಳು ನಷ್ಟದಲ್ಲಿವೆ ಎಂಬ ಸಂಗತಿ ಹೊರಬಿದ್ದಿದೆ. ರಿಸರ್ವ್ ಬ್ಯಾಂಕ್‌ನ ಅಂಕಿ-ಸಂಖ್ಯೆಗಳ ಪ್ರಕಾರ ೨೦೧೫ ಮಾರ್ಚಿನಿಂದ ಸೆಪ್ಟೆಂಬರ್ ವರೆಗಿನ ಅವಧಿಯಲ್ಲಿ ಬ್ಯಾಂಕುಗಳು ಕೊಟ್ಟ ಅನುತ್ಪಾದ ಸಾಲದ ಮೊತ್ತ ಶೇಕಡಾ ೧೫.೧ ರಷ್ಟು ಆಯಿತು. ರಿಸರ್ವ ಬ್ಯಾಂಕಿನ ವೆಬಸೈಟ್‌ನಲ್ಲಿ ತೋರಿಸಲಾಗಿರುವಂತೆ ೨೦೧೫ರ ಜೂನ ವೆಳೆಗೆ ಎಲ್ಲ ಬ್ಯಾಂಕುಗಳ ಒಟ್ಟು ಅನುತ್ಪಾದಕ ಸಾಲ ೭೯,೮೦೩ ಕೋಟಿಯಷ್ಟು ಇತ್ತು! ಇದು ಕೇಂದ್ರ ಸರ್ಕಾರದ ೨೦೧೫-೧೬ ನೇ ಸಾಲಿನ ಬಜೆಟಿನ ಒಟ್ಟು ಖರ್ಚಿನ ೧೮.೬ರಷ್ಟಿವೆ.

ಅತೀ ದೊಡ್ಡ ಸಾಲ ಕೊಡುವ ಬ್ಯಾಂಕ ಆಫ್ ಇಂಡಿಯಾ, ತನ್ನ ಲಾಭದಲ್ಲಿ ಶೇಕಡ ೬೦% ರಷ್ಟು ಇಳಿಕೆಯಾಗಿವೆ ಎಂದು ಘೋಷಿಸಿದೆ. ಅಲ್ಲದೆ, ಅನುತ್ಪಾದಕ ಸಾಲ ಮುಂದಿನ ಅವಧಿಗೂ ಒಂದು ಸಮಸ್ಯೆ ಆಗಿದೆಂದು ಎಚ್ಚರಿಸಿದೆ. ವಸೂಲಿಯಾಗದ ಸಾಲಕ್ಕೆ ಹೆಚ್ಚಿನ ಅವಕಾಶ ಮಾಡಿ ಕೊಟ್ಟದಕ್ಕಾಗಿ ಪಂಜಾಬ ನ್ಯಾಷನಲ್ ಬ್ಯಾಂಕಿನ ಲಾಭ ಶೇಕಡ ೯೩ರಷ್ಟು ಅಂದರೆ ೫೧ ಕೋಟಿಯಷ್ಟು ಕಡಿಮೆಯಾಯಿತು. ಅದೇ ರೀತಿ ಕೆನರಾ ಬ್ಯಾಂಕಿನ ಲಾಭ ಕೂಡ ಶೇಕಡ ೮೭ ರಷ್ಟು ಅಂದರೆ ೮೫ ಕೋಟಿಯಷ್ಟು ಕಡಿಮೆಯಾಯಿತು. ಅನುತ್ಪಾದಕ ಸಾಲ ಕೊಡಮಾಡುವುದರಲ್ಲಿ ಪ್ರಧಾನ ಪಾತ್ರ ವಹಿಸಿರುವ ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳ ಒಟ್ಟು ಸಂಗ್ರಹಿತ ಸಾಲ ೨೦೧೫ ಡಿಸೆಂಬರ್ ವೆಳೆಗಿ ೧೦,೯೧೧ ಕೋಟಿ ರೂಪಾಯಿಗಳಷ್ಟು ಆಗಿತ್ತು.

೨೦೧೩ ನೇ ಇಸವಿಯಿಂದಲೇ ಬ್ಯಾಂಕುಗಳ ವಸೂಲಿಯಾಗದ ಸಾಲ ಸಂಗ್ರಹಿತವಾಗುತ್ತಾ ಬಂತು ಈ ಸಾಲವನ್ನು ಹೆಚ್ಚಾಗಿ ಮೂಲಭೂತ ಸೌಕರ್ಯ ನಿರ್ಮಾಣಕ್ಕಾಗಿ ಮತ್ತು ಗಣಿಗಾರಿಕೆಗಾಗಿ ಇರುವ ಕಂಪನಿಗಳು ತೆಗೆದುಕೊಂಡಿವೆ. ಈ ಕಂಪನಿಗಳ ಯೋಜನೆಗಳು ಕಾರಣಾಂತರದಿಂದ ಮುಗ್ಗರಿಸಿದವು, ಇಲ್ಲವೇ ತಪ್ಪೆಸಿಗಿದವು. ಅವುಗಳ ಆರ್ಥಿಕ ಲಾಭದ ವಿಷಯ ಸರಿಯಿರಲಿಲ್ಲ. ೨೦೧೪ನೇ ಡಿಸೆಂಬರ ಮಾಹೆಯ ರಿಸರ್ವ ಬ್ಯಾಂಕ ಆಫ್ ಇಂಡಿಯಾದ ಆರ್ಥಿಕ ಸಮೀಕ್ಷಾ ವರದಿಯ ಪ್ರಕಾರ ಕಬ್ಬಿಣ ಮತ್ತು ಉಕ್ಕು, ಗಣಿಗಾರಿಕೆ, ಜವಳಿ ಕೈಗಾರಿಕೆ ಈ ಮುಂತಾದ ಕ್ಷೇತ್ರಗಳಿಗೆ ಕೊಟ್ಟಂತ ಅನುತ್ಪಾದಕ ಸಾಲದ ಪ್ರಮಾಣ ಶೇಕಡ ೫೨ ರಷ್ಟು ಇತ್ತು.

ಇಂಥ ಸ್ಥಿತಿ ಉಂಟಾಗುವುದಕ್ಕೆ ಕಾರಣ ಸುಲಭವಾಗಿ ದೊರೆತ ಪರಿಸರಾತ್ಮಕ ಅನುಮತಿ ಮತ್ತು ಭೂಮಿ ಪಡೆಯುವುವಿಕೆ. ಉದಾಹರಣೆ:- ಆಂಧ್ರಪ್ರದೇಶದಲ್ಲಿ ನಾಗಾರ್ಜುನ ಶಾಖೋತ್ಪನ್ನ ಸ್ಥಾವರಕ್ಕೆ ಸ್ಥಳೀಯ ಜನರ ವಿರೋಧದ ನಡುವೆಯೂ ಪರಿಸರಾತ್ಮಕ ಅನುಮತಿಯನ್ನು ಕೊಡಲಾಯಿತು. ಅಲ್ಲಿಯ ನೀರಾವರಿ ಭೂಮಿಯುನ್ನು ಅವಲಂಬಿಸಿದ್ದ ಜನರು ವಿರೋಧಿಸಲು ಪ್ರಾರಂಭಿಸಿದರು. ಆಗ ರಾಷ್ಟೀಯ ಪರಿಸರ ನ್ಯಾಯಾಧೀಕರಣ ಆ ಯೋಜನೆಯ ಅನುಮತಿಯುನ್ನು ರದ್ದು ಮಾಡಿತ್ತು ಅಷ್ಟು ಹೊತ್ತಿಗಾಗಲೇ ೩ ಜನ ಪ್ರತಿಭಟನಾಕಾರರು ಸತ್ತಿದ್ದರು. ನಂತರ ರಾಜ್ಯ ಸರ್ಕಾರವು ಶಾಖೋತ್ಪನ್ನ ಸ್ಥಾವರಕ್ಕೆ ಮಂಜೂರು ಮಾಡಿದ್ದ ಭೂಮಿಯನ್ನು ವಜಾ ಮಾಡಿತು ಮತ್ತು ಆ ಭೂಮಿಯುನ್ನು ಕೇವಲ ಕೃಷಿಯಾಧಾರಿತ ಕೈಗಾರಿಕೆಗಳಿಗೆ ಮಾತ್ರ ಉಪಯೋಗಿಸತ್ತಕ್ಕದೆಂದು ಆದೇಶಿಸಿತು. ಏತನ ಮಧ್ಯ ಕಂಪನಿಯು ೧,೩೦೦ ಕೋಟಿ ಹಣವನ್ನು ಖರ್ಜುಮಾಡಿತ್ತು. ಆ ಯೋಜನೆಯ ಪ್ರಾರಂಭದಲ್ಲಿ ಅದರ ಅಂದಾಜು ವೆಚ್ಚ ೧೨೦೦೦ ಕೋಟಿಯೆಂದು ಮಾಡಲಾಯಿತು.

ಅನುತ್ಪಾದಕ ಭೌತಿಕ ಆಸ್ತಿ ಯಾವುದೆಂಬುದನ್ನು ಊಹಿಸಲು ಕಷ್ಟ ಸಾಧ್ಯವೇ ಆದರೂ ಪರಿಸರಾತ್ಮಕ ಮತ್ತು ಸುಸ್ಥಿರತೆಯ ವಿಷಯಗಳನ್ನು ಅಲಕ್ಷಿಸುವುದು ತನ್ನ ಮೂಗನ್ನು ತಾನೇ ಕೂಯ್ದುಕೊಂಡಂತೆಯೇ ಸರಿ ಪರಿಸರಾತ್ಮಕ ಮತ್ತು ಸಾಮಾಜಿಕ ಸಂಗತಿಗಳನ್ನು ಸಾಧ್ಯವಾದಷ್ಟು ಪರಿಪೂರ್ಣವಾಗಿ ಪರಿಶೀಲಿಸುವುದು ಬ್ಯಾಂಕುಗಳ ಅಗತ್ಯವಾದ ಕರ್ತವ್ಯವಾಗಿರುತ್ತದೆ. ಅಂತರರಾಷ್ಟ್ರೀಯ ಸಹಕಾರಕ್ಕೆ ಸಂಭದಿಸಿದ ಜಪಾನ್ ಬ್ಯಾಂಕು ಪರಿಸರಾತ್ಮಕ ಮತ್ತು ಸಾಮಾಜಿಕ ಪರಿಣಾಮಗಳ ಅಧ್ಯಯನವನ್ನು ಮಾಡುವುದು ಶಾಸನಬದ್ಧ ಕರ್ತವ್ಯವೆಂದು ಮಾಡಿದೆ.

ಭಾರತದಲ್ಲಿಯ ಬ್ಯಾಂಕುಗಳೂ ಕೂಡ ಜಗತ್ತಿನಾದ್ಯಂತ ಇರುವ ಹಣಕಾಸಿನ ಸಂಸ್ಥೆಗಳು ಮಾಡಿಕೊಂಡಿರುವ ಇಕ್ವೇಟರ್ ತತ್ವಗಳನ್ನು ಅನುಸರಿಸುವುದು ಒಳ್ಳೆಯದು ಎಂಬುದಾಗಿ ಸುಜಿತ್ ಕುಮಾರ್ ಸಿಂಗ್ ಎಂಬ ಅರ್ಥಶಾಸ್ತ್ರಜ್ಞರು ಹೇಳುತ್ತಾರೆ. ಕಂಪನಿಗಳಿಗೆ ಸಾಲವನ್ನು ಕೊಡುವ ಪದ್ಧತಿಯನ್ನು ಕ್ರಮಗೊಳಿಸಬೇಕು ಎಂದು ಕೆಲ ತಜ್ಞರು ಹೇಳುತ್ತಾರೆ. ಒಟ್ಟಾರೆ ಭಾರತದ ಬ್ಯಾಂಕುಗಳು ಸಾಲಕೊಡುವುದರಲ್ಲಿ ಬಿಗಿಯಾದ ಪರಾಮರ್ಶೆಯನ್ನು ಮಾಡದೇ ಇರುವುದು ಅವುಗಳ ಹಿಂದಿನ ಆರ್ಥಿಕ ಸಂಕಷ್ಟಕ್ಕೆ ಕಾರಣವಾಗಿದೆ.

ಸಾಭಾರ ಡೌನ್ ಟು ಅರ್ಥ್ ಅನು. ಸು.ಕೌ

ಕನ್ಹಯ್ಯಾಕುಮಾರರ ಚರ್ಚಿತ ರೋಮಾಂಚನಕಾರಿ ಭಾಷಣ

–ಕನ್ಹಯ್ಯಕುಮಾರ

(ಜೆ.ಎನ್.ಯು ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನಯ್ಯಕುಮಾರ್ ೨೩ದಿನಗಳ ಕಾರಾಗೃಹ ವಾಸದಿಂದ ಹೊರಬಂದ ದಿನ ಮಾರ್ಚ್ ೨೩ರಂದು ಜೆ.ಎನ್.ಯು ವಿದ್ಯಾರ್ಥಿ ಮತ್ತು ಜನಸಮುದಾಯವನ್ನು ಉದ್ದೇಶಿಸಿ ಮಾಡಿದ ಭಾಷಣದ ಪೂರ್ತಪಾಠ ಇಲ್ಲಿದೆ. ಜನಪದ ವಿಚಾರದ ಓದುಗರಿಗೆ ಅವರ ವಿಚಾರಗಳು ನೇರವಾಗಿ ಗೊತ್ತಾಗಲೆಂದು ಇಲ್ಲಿ ಅದನ್ನು ಪ್ರಸ್ತುತ ಪಡಿಸಲಾಗಿದೆ. ಸಂ)

ಹೋರಾಟಕ್ಕೆ ಬೆಂಬಲವಾಗಿ ರೋಹಿತ್ ವೇಮುಲಾಗೆ ನ್ಯಾಯ ದೊರಕಿಸಿಕೊಡುವ ಹೋರಾಟದ ಸಂದರ್ಭದಲ್ಲಿ ಬೆಂಬಲವಾಗಿ ನಮ್ಮೊಂದಿಗೆ ನಿಂತ ಎಲ್ಲರಿಗೂ ನನ್ನ ವಂದನೆ. ಮಾಧ್ಯಮದವರಾಗಿರಲಿ ಅಥವಾ ನಾಗರೀಕ ಸಮಾಜದವರಾಗಿರಲಿ, ರಾಜಕೀಯ ಅಥವಾ ರಾಜಕೀಯೇತರ ಎಲ್ಲರಿಗೂ ನಾನು ನಮಸ್ಕರಿಸುತ್ತೇನೆ (ಲಾಲ್ ಸಲಾಮ್).

ಪಾರ್ಲಿಮೆಂಟಿನಲ್ಲಿ ಕುಳಿತು ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ತೀರ್ಮಾನಿಸುವ ಯೋಗ್ಯವಂತ ಆ ಜನರಿಗೆ ನಾನು ವಿಶೇಷವಾಗಿ ವಂದನೆ ಹೇಳುತ್ತೇನೆ. ಅವರಿಗೂ, ಅವರ ಪೋಲೀಸರಿಗೂ ಮತ್ತು ಮಾಧ್ಯಮದ ವಿವಿಧ ಮೂಲಗಳಿಗೂ ವಂದನೆ ಹೇಳುತ್ತೇನೆ (ಗಡಗಿಚ್ಚುವ ಕೂಗು).

ಯಾರ ಬಗ್ಗೆಯೂ ನನಗೆ ದ್ವೇಷವಿಲ್ಲ. ಅದರಲ್ಲಿಯೂ ಎ.ಬಿ.ವಿ.ಪಿ ಬಗ್ಗೆ (ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತು ಬಗ್ಗೆ) ಅದು ಬಿ.ಜೆ.ಪಿ ಯ ವಿದ್ಯಾರ್ಥಿ ಅಂಗವಾಗಿದೆ. ಏಕೆ ಎಂಬುದು ನಿಮಗೆ ಗೊತ್ತಲ್ಲವೇ? ಜನಸಮೂಹ ಕೂಗುತ್ತದೆ. ಏಕೆ? ಏಕೆಂದರೆ ನಮ್ಮ ವಿಶ್ವವಿದ್ಯಾಲಯದ ಪರಿಸರದಲ್ಲಿರುವ ಎ.ಬಿ.ವಿ.ಪಿ ನಿಜವಾಗಿ ಹೊರಗಿರುವ ಎ.ಬಿ.ವಿ.ಪಿ ಗಿಂತ ಹೆಚ್ಚು ತರ್ಕಬದ್ಧವಾಗಿದೆ. ಯಾರು ತಮ್ಮನ್ನು ರಾಜಕೀಯ ಪಂಡಿತರೆಂದು ಕರೆದುಕೊಳ್ಳುತ್ತಾರೊ ಅಂತವರಿಗೆ ನನ್ನ ಒಂದು ಸಲಹೆ ಇದೆ – ಕಳೆದ ವಿದ್ಯಾರ್ಥಿ ಅಧ್ಯಕ್ಷೀಯ ಚರ್ಚೆಯ ಸಮಯದಲ್ಲಿ ಎ.ಬಿ.ವಿ.ಪಿ ಉಮೇದುವಾರ ಯಾವ ಮಟ್ಟಕ್ಕೆ ಇಳಿದಿದ್ದ ಎಂಬುದನ್ನು ಜ್ಞಾಪಿಸಿಕೊಳ್ಳಿ. ಜೆ.ಎನ್.ಯು.ನ ಎ.ಬಿ.ವಿ.ಪಿಯನ್ನು ನಾವು ಅಲಕ್ಷಿಸಿದಾಗ ಏನಾಯಿತೆಂಬುದರ ಬಗ್ಗೆ ನೀವೆ ಸ್ವತಃ ಒಂದು ತೀರ್ಮಾನಕ್ಕೆ ಬರಬಹುದು.

ದೇಶದಲ್ಲಿ ನಿಮ್ಮೆಲ್ಲರ ಭವಿಷ್ಯ ಯಾವರೀತಿ ಇದೆ ಎಂಬುದನ್ನು ನೀವೆ

ಊಹಿಸಬಹುದು. ಎ.ಬಿ.ವಿ.ಪಿ ಬಗ್ಗೆ ಯಾವ ದ್ವೇಷವೂ ಇಲ್ಲ. ಏಕೆಂದರೆ ನಾವು ನಿಜವಾಗಿಯೂ ಪ್ರಜಾಸತ್ತಾತ್ಮವಾಗಿದ್ದೇವೆ; ಸಂವಿಧಾನದಲ್ಲಿ ನಂಬಿಕೆ ಇಟ್ಟಿದ್ದೇವೆ. ಆದ್ದರಿಂದಲೆ ನಾವು ಎ.ಬಿ.ವಿ.ಪಿಯನ್ನು ನಮ್ಮ ಶತ್ರುಗಳೆಂದು ಭಾವಿಸುವುದಿಲ್ಲ. ಆದರೆ ವಿರೋಧಿಗಳೆಂದು ಭಾವಿಸುತ್ತೇವೆ. ನನ್ನ ಸ್ನೇಹಿತರೆ ನೀವು ಭರವಸೆ ಇಡಿ ನಾನು ನಿಮ್ಮೆಲ್ಲರ ವಿರುದ್ಧ ದ್ವೇಷ ಸಾಧಿಸಲು ಹೋಗುವುದಿಲ್ಲ. ಏಕೆಂದರೆ ಯಾರ ವಿರುದ್ಧ ದ್ವೇಷ ಸಾಧಿಸುತ್ತೇವೆಯೋ ಅವರು ದ್ವೇಷಕ್ಕೆ ಒಳಗಾಗಲು ಯೋಗ್ಯವಾಗಿರಬೇಕು!

ಜೆ.ಎನ್.ಯು ದಾರಿ ತೋರಿಸಿದೆ. ಅದು ಇಂದಿನ ವರ್ತಮಾನ ಕಾಲದಲ್ಲಿ ಯಾವುದು ಸರಿ ಮತ್ತು ಯಾವುದು ತಪ್ಪು ಎಂಬುದನ್ನು ಹೇಳಲು ಹಿಂಜರಿಯುವುದಿಲ್ಲ. ಈ ಪ್ರತಿಭಟನೆಯ ಉತ್ತಮ ಸಂಗತಿಯೇನೆಂದರೆ ಅದು ಸ್ವಯಂ ಪ್ರೇರಿತವಾಗಿದೆ. ನಾನು ಈ ಮಾತನ್ನು ಒತ್ತಿ ಏಕೆ ಹೇಳುತ್ತಿದ್ದೇನೆಂದರೆ ಎ.ಬಿ.ವಿ.ಪಿ ಮಾಡಿದ ವಿರೋಧ ಯೋಜನಾ ಬದ್ಧವಾಗಿತ್ತು.

ಈ ದೇಶದ ಸಂವಿಧಾನದಲ್ಲಿ, ದೇಶದ ಕಾನೂನುಗಳಲ್ಲಿ ಮತ್ತು ನ್ಯಾಯಾಂಗದ ಪ್ರಕ್ರಿಯೆಯಲ್ಲಿ ನಮಗೆ ಅಚಲವಾದ ನಂಬಿಕೆ ಇದೆ. ಸತ್ಯವೊಂದೇ ಬದಲಾವಣೆ ಎಂದು ನಾವು ನಂಬುತ್ತೇವೆ. ನಾವು ಆ ಬದಲಾವಣೆಗಾಗಿ ಕಾಯುತ್ತಾ ನಿಂತಿದ್ದೇವೆ. ತಪ್ಪು ಭಾವಿಸಬೇಡಿ, ಬದಲಾವಣೆ ಬಂದೇ ಬರುತ್ತದೆ.

ನಮಗೆ ಸಂವಿಧಾನದಲ್ಲಿ ಅಚಲವಾದ ನಂಬಿಕೆ ಇದೆ. ಸಂವಿಧಾನದಲ್ಲಿ ಸಮಾಜವಾದ, ಜಾತ್ಯಾತೀತವಾದ. ಸಮಾನತೆಗಳನ್ನು ಘೋಷಿಸುವ ನಿಯಮಗಳಿಗೆ ನಾವು ಪೂರ್ಣಬದ್ಧರಾಗಿದ್ದೇವೆ.

ನಾನು ಇಲ್ಲಿ ಭಾಷಣಕೊಡಲು ಬಯಸುವುದಿಲ್ಲ; ನನ್ನ ಅನುಭವವನ್ನು ಹೇಳಬಯಸುತ್ತೇನೆ. ಮೊದಲು ನಾನು ಹೆಚ್ಚು ಅಧ್ಯಯನ ಮಾಡುತ್ತಿದ್ದೆ, ವ್ಯವಸ್ಥೆಯ ಮಹತ್ವ ಕಡಿಮೆಯೆಂದು ತಿಳಿದಿದ್ದೆ, ಈಗ ನಾನು ಕಡಿಮೆ ಅಧ್ಯಯನ ಮಾಡಿ ವ್ಯವಸ್ಥೆಯನ್ನು ಹೆಚ್ಚು ಸಹಿಸಿದ್ದೇನೆ.

ಜೆ.ಎನ್.ಯು ಗೆ ಸಂಶೋಧನೆ ಮಾಡುವ ಪರಂಪರೆ ಇರುವುದರಿಂದ ನನ್ನ ಬಳಿ ಪ್ರಾಥಮಿಕ ಮಾಹಿತಿ ಇದೆ ಮತ್ತು ತುಂಬಾ ಇತ್ತೀಚಿಗಿನ ಮಾಹಿತಿ ಇದೆ. ಮೊದಲು ಹೇಳಬೇಕಾದುದನ್ನು ಮೊದಲು ಹೇಳುತ್ತೇನೆ. ನ್ಯಾಯಾಂಗದ ಪ್ರಕ್ರಿಯೆಯಬಗ್ಗೆ ನಾನು ಹೇಳುವುದು ಏನೂ ಇಲ್ಲ. ಒಂದು ಮಾತು ಮಾತ್ರ ಹೇಳುತ್ತೇನೆ ಈ ದೇಶದ ಎಲ್ಲ ಜನರು ಯಾರು ಸಂವಿಧಾನವನ್ನು ನಿಜವಾಗಿ ನಂಬುತ್ತಾರೊ ಮತ್ತು ಯಾರು ಬಾಬಾ ಸಾಹೇಬರ ಕನಸುಗಳನ್ನು ನನಸನ್ನಾಗಿ ಮಾಡಬಯಸುತ್ತಾರೊ ಅಂಥವರಿಗೆ ನನ್ನ ಸೂಚನೆ ಗೊತ್ತಾಗಿದೆ. ನ್ಯಾಯನಿಂದನೆಯ ಯಾವ ಮಾತನ್ನೂ ಹೇಳುವುದಿಲ್ಲ.(ಸಭೆ ನಗುತ್ತದೆ)

ಮಾನ್ಯ ಪ್ರಧಾನಮಂತ್ರಿಗಳು ಟ್ವೀಟ್ ಮಾಡಿದ್ದಾರೆ. ಅವರು ಹೇಳುತ್ತಾರೆ : ಸತ್ಯಮೇವ ಜಯತೆ(ಸತ್ಯಕ್ಕೆ ಜಯ) (ನಗು). ನನ್ನ ಉತ್ತರ ಈ ರೀತಿ ಇದೆ; ಮಾನ್ಯ

ಪ್ರಧಾನ ಮಂತ್ರಿಗಳೇ, ನಿಮ್ಮೊಂದಿಗೆ ನನ್ನದು ಗಂಭೀರವಾದ ಭಿನ್ನಾಭಿಪ್ರಾಯಗಳಿವೆ. ಸತ್ಯಮೇವಜಯತೆ ಇದು ನಿಮ್ಮ ಘೋಷಣೆಯಲ್ಲ; ಅದು ದೇಶದ ಮತ್ತು ಸಂವಿಧಾನದ ಗುರಿ. ಆದ್ದರಿಂದ ನಾನು ಕೂಡ ಸತ್ಯಮೇವಜಯತೆ ಎಂದು ಹೇಳುತ್ತೇನೆ.

ಸತ್ಯ ಜಯಶಾಲಿಯಾಗಿ ಹೊಮ್ಮುವುದು. ಈಗ ಕೆಲದಿನಗಳಿಂದ ನನ್ನ ಕುಟುಂಬವರೊಂದಿಗೆ ಪರಿಚಿತರಾಗಿದ್ದೀರಿ. ರೈಲ್ವೆನಿಲ್ದಾಣಗಳಲ್ಲಿ ಮುಗ್ದಜನರಲ್ಲಿ ನಂಬಿಕೆ ಹುಟ್ಟಿಸಿ ಉಂಗುರವನ್ನು ಮಾರುವ ಜನರಿದ್ದಾರೆ. ಆ ಉಂಗುರ ಅವರಿಗೆ ಬೇಕಾದುದೆಲ್ಲವನ್ನು ಕೊಡುತ್ತದೆ ಎಂದು ಹೇಳುತ್ತಾರೆ.

ಇದೇ ರೀತಿ ವಂಚನೆ ಮಾಡುವಂಥ ವೃತ್ತಿಯ ನೀತಿನಿರ್ಧಾರಕರು ನಮ್ಮ ದೇಶದಲ್ಲಿದ್ದಾರೆ. ಅವರು ಅನೇಕ ಮಾತನ್ನು ಹೇಳುತ್ತಾರೆ. ಕಪ್ಪು ಹಣ ಬರುವುದು. ಹರ ಹರ ಮೋದಿ(ಸಭೆ ನಗುತ್ತದೆ) ಈ ಮರಣಸದೃಶ ಹಣದುಬ್ಬರ ಇಲ್ಲದಾಗುವುದು, ಎಲ್ಲರೊಂದಿಗೆ ಎಲ್ಲರ ವಿಕಾಸ ಎಂದು.

ಭಾರತೀಯರು ಅಂತ ವಿಷಯಗಳನ್ನು ಮರೆಯುತ್ತರಾದರೂ ಈ ಸಲದ ಘೋಷಣೆಗಳು ಎಷ್ಟೊಂದು ಆಕರ್ಷಕವಾಗಿವೆ ಎಂದರೆ ನಾವು ಆ ಘೋಷಣೆಗಳನ್ನು ಮರೆಯಲು ಸಾಧ್ಯವಾಗುವುದಿಲ್ಲ.

ಈ ಘೋಷಣೆಗಳು ಮರೆತು ಹೋಗದಂತೆ ಮಾಡಲು ಪ್ರಯತ್ನಗಳು ನಡೆದಿವೆ. ಹೇಗೆ? ಸಂಶೋಧನೆ ಮಾಡುವ ವಿದ್ಯಾರ್ಥಿಗಳ ವಿದ್ಯಾರ್ಥಿವೇತನವನ್ನು ತಡೆದರೆ ಅವರು ಅದನ್ನು ಕೊಡುವಂತೆ ನಿಮ್ಮನ್ನು ಪ್ರಾರ್ಥಿಸಿಕೊಳ್ಳಬೇಕು. ಆಗ ನೀವು ಒಂದು ಕರಾರಿನ ಮೇಲೆ ಒಪ್ಪುತ್ತೀರಿ. ಆ ಕರಾರು ಏನೆಂದರೆ ಮೊದಲಿದ್ದ ಐದುಸಾವಿರ ಅಥವಾ ಎಂಟುಸಾವಿರದ ಮಟ್ಟಕ್ಕೆ ಇರುವುದೆಂಬ ಕರಾರಿನ ಮೇಲೆ. ನಿಮ್ಮ ವಿರುದ್ಧ ಯಾರು ಮಾತನಾಡುತ್ತಾರೆ? ಜೆ.ಎನ್.ಯು ಅಲ್ಲದೆ ಯಾರು ನೀವು ಅ ಪ್ರಜಾತಾಂತ್ರಿಕ ರಾಜ್ಯದ ವಿರುದ್ಧ ಮಾತನಾಡಿದರೆ ಅದರ ಸೈಬರ್ ವ್ಯವಸ್ಥೆ ಏನು ಮಾಡುವುದು? ಅದು ಉದ್ದೇಶ ಪೂರ್ವಕ ವಿಡಿಯೋ ತಯಾರಿಸುವುದು ಮತ್ತು ಅವಮಾನಗೊಳಿಸುವುದು. ಇದು ಒಂದು ಕಷ್ಟದ ಸಮಯ ಮರೆಯಬೇಡಿ. ಜೆ.ಎನ್.ಯು ಮೇಲೆ ಮಾಡಿದ ದಾಳಿ ಪೂರ್ವಯೋಜಿತ ದಾಳಿ. ಏಕೆಂದರೆ ರೋಹಿತ್ ವೇಮುಲಾಗೆ ನ್ಯಾಯ ದೊರೆಯಬೇಕೆಂಬ ಹೋರಾಟವನ್ನು ಮುಗಿಸಬೇಕು ಮತ್ತು ಅದಕ್ಕೆ ಕೆಟ್ಟಹೆಸರು ತರಬೇಕು ಎಂಬುದು ಅದರ ಉದ್ದೇಶವಾಗಿದೆ. ನೀವು ಬಹಳ ಪ್ರಮುಖ ಸಮಯದಲ್ಲಿ ಜೆ.ಎನ್.ಯು ವಿಷಯವನ್ನು ಉಳಿಸಿಕೊಂಡು ಬಂದಿದ್ದೀರಿ. ಆರ್.ಎಸ್.ಎಸ್ ನ ಪಂಡಿತ(ಸುಬ್ರಮಣ್ಯಸ್ವಾಮಿ) ಏಕೆಂದರೆ ಈ ದೇಶದ ಜನತೆ ಪ್ರಧಾನಮಂತ್ರಿಯವರು ಪ್ರತಿಯೊಬ್ಬರ ಬ್ಯಾಂಕ್ ಖಾತೆಯಲ್ಲಿ ಹದಿನೈದು ಲಕ್ಷ ರುಪಾಯಿ ಹಾಕುವುದಾಗಿ ಕೊಟ್ಟಿದ್ದ ಭರವಸೆಯನ್ನು ಮರೆಯಬೇಕೆಂಬ ಉದ್ಧೇಶ ನಿಮ್ಮದಾಗಿದೆ. ಜೆ.ಎನ್.ಯು ವಿದ್ಯಾರ್ಥಿಗಳು ಅದನ್ನು ಮರೆಯುವಂತೆ ಮಾಡುವುದು ಸುಲಭದ ಕೆಲಸವಲ್ಲ. ಸರಕಾರ ದಬ್ಬಾಳಿಕೆ ನಡೆಸಿದಾಗಲೆಲ್ಲ ಜೆ.ಎನ್.ಯು ಪ್ರತಿಭಟನೆಯ ವಿರೋಧದ ಧ್ವನಿ

ಎತ್ತಿದೆ.

ಸೈನಿಕರನ್ನು ವಿದ್ಯಾರ್ಥಿಗಳ ವಿರುದ್ಧ ನಿಲ್ಲಿಸಬೇಡಿ ದೇಶದ ಯುವಕರು ಗಡಿಯಲ್ಲಿ ಸಾಯುತ್ತಿದ್ದಾರೆ ಎಂಬ ಮಾತನ್ನು ಹೇಳಿ ನಮ್ಮ ಹೋರಾಟದ ತೀವ್ರತೆಯನ್ನು ನೀವು ಅಷ್ಟು ಸುಲಭವಾಗಿ ಕಡಿಮೆ ಮಾಡಲಾರಿರಿ. ನಾನು ಆ ವೀರಸೇನಾನಿಗಳಿಗೆ ನಮಸ್ಕರಿಸುತ್ತೇನೆ. ಪಾರ್ಲಿಮೆಂಟಿನಲ್ಲಿ ಈ ಬಗೆಯ ಹೇಳಿಕೆ ಕೊಟ್ಟ ಬಿ.ಜೆ.ಪಿ ಮುಖಂಡನಿಗೆ ನಾನು ಕೇಳುವ ಪ್ರಶ್ನೆಯೊಂದಿದೆ. (ನಾನು ಅವರ ಹೆಸರು ಹೇಳ ಬಯಸುವುದಿಲ್ಲ ಏಕೆಂದರೆ ಹೋರಾಟ ಸೈದ್ಧಾಂತಿಕವಾಗಿದಲ್ಲಿ ವ್ಯಕ್ತಿಗಳಿಗೆ ಅನಗತ್ಯವಾದ ಪ್ರಚಾರ ಕೊಡಬಾರದು ಎಂಬುದನ್ನು ನಾನು ಕಾರಾಗೃಹದಲ್ಲಿ ಕಲಿತೆ). ದೇಶದ ಯುವಕರು ಗಡಿಯಲ್ಲಿ ಸಾಯುತ್ತಿದ್ದಾರೆ ಎಂಬುದಾಗಿ ಬಿ.ಜೆ.ಪಿ ಮುಖಂಡ ಗುಡುಗಿದ.

ಆ ಮುಖಂಡನನ್ನು ಕೇಳಬಯಸುತ್ತೇನೆ : ಆ ಯುವಕ ನಿಮ್ಮ ಸಹೋದರನೆ ? ಸಾವಿರಾರು ಜನ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅವರು ನಮಗಾಗಿ ಧಾನ್ಯ ಬೆಳೆಯುತ್ತಾರೆ. ಆ ರೈತರು ಈ ಯುವಕರ ತಂದೆಗಳೆ. ಅವರ ಬಗ್ಗೆ ನಿಮಗೆ ಹೇಳಲು ಏನು ಇಲ್ಲವೋ, ಹೊಲದಲ್ಲಿ ಕೆಲಸ ಮಾಡುವ ನನ್ನ ತಂದೆ ಮತ್ತು ನನ್ನ ಸಹೋದರರೇ ಸೈನ್ಯ ಸೇರುತ್ತಾರೆ. ಈ ರೀತಿಯ ಬಣ್ಣದ ಮಾತನ್ನು ಹೇಳಿ ದೇಶದಲ್ಲಿ ತಪ್ಪು ಚರ್ಚೆಯನ್ನು ಉಂಟುಮಾಡಬೇಡಿ. ಏಕೆಂದರೆ ದೇಶಕ್ಕಾಗಿ ಸಾಯುವವರು ದೇಶದೊಳಗೂ ಸಾಯುತ್ತಾರೆ ಮತ್ತು ದೇಶದ ಗಡಿಯಲ್ಲೂ ಸಾಯುತ್ತಾರೆ.

ಆ ಬಿ.ಜೆ.ಪಿ ಮುಖಂಡನಿಗೆ ನನ್ನ ಪ್ರಶ್ನೆ ಏನೆಂದರೆ : ನಿಮ್ಮ ರಾಜಕಾರಣದಲ್ಲಿ ಯಾರನ್ನು ಗುರಿಮಾಡುತ್ತಿದ್ದೀರಿ? ಸಾಯುತ್ತಿರುವವರ ಬಗ್ಗೆ ಯಾರು ಜವಾಬ್ದಾರಿ ತೆಗೆದುಕೊಳ್ಳುತ್ತೀರಿ? ಯಾರು ಹೋರಾಡುತ್ತಿದ್ದಾರೊ ಅವರು ಜವಾಬ್ಧಾರರಲ್ಲ ಬದಲಿಗೆ ಅವರು ಹೋರಾಡುವಂತೆ ಯಾರು ಮಾಡುತ್ತಾರೊ ಅವರು ಜವಾಬ್ಧಾರರು. ಈ ಯುದ್ಧಕ್ಕೆ ಯಾರು ಜವಾಬ್ಧಾರಿ ಜನರು ಹೋರಾಡುವಂತೆ ಯಾರು ಮಾಡುತ್ತಾರೆ? ನನ್ನ ತಂದೆ ಸಾಯುತ್ತಿದ್ದಾರೆ, ನನ್ನ ಸಹೋದರ ಸಾಯುತ್ತಿದ್ದಾನೆ ಎಂಬುದನ್ನು ನೋಡಿ.

ನಮ್ಮ ದೇಶವನ್ನು ದೋಷಗಳಿಂದ ಸ್ವತಂತ್ರ್ಯಗೊಳಿಸುವುದು ತಪ್ಪೆ?

ಭಾರತವೇನಾದರು ಯಾರನ್ನಾದರು ಗುಲಾಮರನ್ನಾಗಿ ಮಾಡಿದಿಯೆ ಎಂದು ಜಗಳ ಗಂಟುತನದ ಧ್ವನಿಯಲ್ಲಿ ಪ್ರಶ್ನೆ ಕೇಳುತ್ತಾರೆ. ಅವರಿಗೆ ನನ್ನ ಉತ್ತರ, ಇಲ್ಲ. ನಾವು ಭಾರತದಿಂದ ಸ್ವಾತಂತ್ರ್ಯ ಬಯಸುತ್ತಿಲ್ಲ ಎಂಬುದು ಸ್ಪಷ್ಟವಾಗಲಿಲ್ಲವೆ? ನಾವು ಭಾರತದಿಂದ ಸ್ವಾತಂತ್ರ್ಯ ಬಯಸುತ್ತಿಲ್ಲ. ಆದರೆ ಬಯಸುತ್ತಿರುವುದು ದೇಶದಲ್ಲಿಯ ಸ್ವಾತಂತ್ರ್ಯ. ಈ ಎರಡರಲ್ಲಿ ವ್ಯತ್ಯಾಸವಿದೆ. ನಾವು ಬ್ರಿಟಿಷರಿಂದ ಸ್ವಾತಂತ್ರ್ಯ ಬೇಕೆಂದು ಕರೆ ಕೊಡುತ್ತಿಲ್ಲ ಆ ಸ್ವಾತಂತ್ರ್ಯ ನಾವು ಪಡೆದಾಗಿದೆ. ಅದನ್ನು ನಮ್ಮ ಜನ ಅವರಿಂದ ಕಿತ್ತುಕೊಂಡಿದ್ದಾರೆ.

ಕಾರಾಗೃಹ ಯಾವ ರೀತಿ ಇತ್ತು. ಈಗ ನಾನು ನನ್ನ ಜೈಲಿನ ಅನುಭವಕ್ಕೆ

ಬರುತ್ತೇನೆ. ನೀವು ಏಕೆ ಲಾಲ್ ಸಲಾಮ್, ಲಾಲ್ ಸಲಾಮ್ ಎಂದು ಹೇಳುತ್ತಿರುತ್ತೀರಿ ಎಂದು ಪೋಲೀಸರು ಕೇಳಿದರು. ಈ ಪ್ರಶ್ನೆ ತನಿಖೆಯ ಭಾಗವಾಗಿರಲಿಲ್ಲವೆಂಬುದನ್ನು ನಾನು ಸ್ಪಷ್ಟಪಡಿಸಬೇಕು. ಊಟಕೊಡಲು ಮತ್ತು ವೈದ್ಯಕೀಯ ಪರೀಕ್ಷೆಗಾಗಿ ಕರೆದುಕೊಂಡು ಹೋಗಲು ಪೋಲೀಸರು ಬರುತ್ತಿದ್ದರು. ನಾನು ಜೆ.ಎನ್.ಯ ವಿದ್ಯಾರ್ಥಿಯಾಗಿದ್ದರಿಂದ ಅದರಲ್ಲೂ ಬ್ರಹ್ಮಪುತ್ರ ಹಾಸ್ಟೆಲ್‌ನವನಾದ್ದರಿಂದ ಮಾತನಾಡದೆ ಇರಲು ಹೇಗೆ ಸಾಧ್ಯ? ಆದ್ದರಿಂದ ನಾನು ಒಬ್ಬ ಪೋಲಿಸ್ ಜೊತೆಗೆ ಮಾತನಾಡಲು ಪ್ರಾರಂಭಿಸಿದೆ. ಅವನೂ ಕೂಡ ನನ್ನಂತೆಯೇ ಯೋಚನೆ ಮಾಡುವವನಾಗಿದ್ದಾನೆ ಎಂಬುದನ್ನು ಪತ್ತೆ ಹಚ್ಚಿದೆ. ಪೋಲೀಸ್ ಇಲಾಖೆಯಲ್ಲಿ ಕೆಲಸ ಪಡೆಯುವವನ ತಂದೆ ಓರ್ವ ರೈತನಾಗಿರಬಹುದು ಅಥವಾ ಕೂಲಿಯವನಾಗಿರಬಹುದು ಅಥವಾ ಬಿಹಾರಿನಂಥ ಹಿಂದುಳಿದ ರಾಜ್ಯದ ವ್ಯಕ್ತಿಯ ಮಗನಾಗಿರಬಹುದು. ನಾನೂ ಕೂಡ ತುಂಬಾ ಬಡಕುಟುಂಬದಿಂದ, ರೈತ ಕುಟುಂಬದಿಂದ ಬಂದವನಾಗಿದ್ದೇನೆ. ಸಾಮಾನ್ಯವಾಗಿ ಬಡ ಕುಟುಂಬಗಳಿಂದ ಬಂದವರೇ ಪೋಲೀಸ್ ಇಲಾಖೆಗೆ ಸೇರಿರುತ್ತಾರೆ. ಪೋಲೀಸರು, ಕಾನಸ್ಟೇಬಲ್, ಹೆಡ್ ಕಾನಸ್ಟೇಬಲ್ ಮತ್ತು ಇನಸ್ಪೆಕ್ಟರ್ ದರ್ಜೆಯವರ ಬಗ್ಗೆ ಮಾತನಾಡುತ್ತಿದ್ದೇನೆ. ಐ.ಪಿ.ಎಸ್ ದರ್ಜೆಯ ಅಧಿಕಾರಿಗಳೊಂದಿಗೆ ಹೆಚ್ಚು ಸಂವಾದ ಆಗಿರಲಿಲ್ಲ.

ಪೋಲೀಸ್ ಕೇಳಿದ : ಈ ಲಾಲ್ ಸಲಾಮ್ ಏನು?

ನನ್ನ ಉತ್ತರ : ಲಾಲ್ ಏಂದರೆ ಕ್ರಾಂತಿ

ಆತ ಕೇಳಿದ ಸಲಾಮ್ ಏನು?

ಅಂದರೆ ಕ್ರಾಂತಿಗೆ ಜಯವಾಗಲಿ.

ಪೋಲಿಸನಿಗೆ ಅರ್ಥವಾಗಲಿಲ್ಲ. ಇನಕಿಲಾದ್ ಜಿಂದಾಬಾದ್ ಎಂಬ ಘೋಷಣೆಯ ಬಗ್ಗೆ ಕೇಳಿದ. ಇನ್ಕಿಲಾಬ್ ಎಂದರೆ ಕ್ರಾಂತಿ ಎಂದು ಹೇಳಿದೆ. ಎ.ಬಿ.ವಿ.ಪಿ ಅವರೂ ಕೂಡ ಈ ಘೋಷಣೆ ಕೂಗುತ್ತಾರಲ್ಲ. ಆಗ ನಾ ಅಂದೆ ಅವರು ಎಂಥ ಮೋಸದ ಕ್ರಾಂತಿಕಾರರೆಂಬುದು ಗೊತ್ತಾಯಿತಾ? ನಾವು ನಿಜವಾದ ಕ್ರಾಂತಿಕಾರರು.

ನಂತರ ಆ ಪೋಲೀಸ್ ನನಗೆ ಇನ್ನೊಂದು ಪ್ರಶ್ನೆ ಕೇಳಿದ : ಜೆ.ಎನ್.ಯುನಲ್ಲಿ ಇರುವವರಿಗೆ ಎಲ್ಲ ಪದಾರ್ಥಗಳು ಅಗ್ಗದಲ್ಲಿ ಸಿಗುತ್ತವಲ್ಲವೆ ಎಂದು. ನಿನಗೂ ಅದು ಅನ್ವಯಿಸುವುದಿಲ್ಲವೆ ಎಂದು ಕೇಳಿದೆ. ಅವನು ದಿನಕ್ಕೆ ಹದಿನೆಂಟುಗಂಟೆಗಳ ಕಾಲ ಕೆಲಸ ಮಾಡುತ್ತಾನೆ. 'ನಿನಗೆ ಹೆಚ್ಚುವರಿ ಸಂಬಳ ಸಿಗುವುದಿಲ್ಲವೇ ಎಂದು ಕೇಳಿದೆ'. ಅದಕ್ಕೆ ಅವನು ಇಲ್ಲ ಎಂದು ಉತ್ತರಿಸಿದ. ಹಾಗಾದರೆ ಹೇಗೆ ಜೀವನ ನಿಬಾಯಿಸುತ್ತಿ ಎಂದು ಕೇಳಿದಾಗ ಅವನು ನೀವು ಭ್ರಷ್ಟಾಚಾರ ಎಂದು ಕರೆಯುವ ಮೂಲಕ ಎಂದು ಎಚ್ಚರಿಸಿದ. ಸಮವಸ್ತ್ರಕ್ಕಾಗಿ ನೂರ ಹತ್ತು ರುಪಾಯಿಗಳ ಸಹಾಯಧನ ಪಡೆಯುತ್ತಾನೆ. ಈ ಮೊತ್ತದಲ್ಲಿ ಒಳ ವಸ್ತ್ರವನ್ನೂ ಖರೀದಿಸಲು ಸಾಧ್ಯವಿಲ್ಲ. ಇದೆಲ್ಲವನ್ನು ಪೋಲೀಸ ಸ್ವಂತವಾಗಿ ಹೇಳಿದ. ಈ ವಿಷಯದ ವಿರುದ್ಧವಾಗಿಯೇ ಅಂದರೇ

ಹಸಿವು, ಭ್ರಷ್ಟಾಚಾರ ಮುಂತಾದವುಗಳಿಂದ ನಾವು ಸ್ವಾತಂತ್ರ್ಯ ಬಯಸುತ್ತಿದ್ದೇವೆ ಎಂದು ಅವನಿಗೆ ವಿವರಿಸಿದೆ.

ಈ ಸುಮಾರಿಗೆ ಹರಿಯಾಣದಲ್ಲಿ ಪ್ರತಿಭಟನೆ ಪ್ರಾರಂಭವಾಗಿತ್ತು. ನಿಮಗೆ ಗೊತ್ತಿರುವಂತೆ ದಿಲ್ಲಿಯಲ್ಲಿಯ ಪೋಲೀಸ್ ಪಡೆಯ ಹೆಚ್ಚು ಪೋಲೀಸರು ಹರಿಯಾಣದವರಾಗಿದ್ದಾರೆ. ಅವರು ಮಾಡುವ ತುಂಬಾ ಕಠಿಣ ಕೆಲಸದ ಬಗ್ಗೆ ನನಗೆ ಗೌರವವಿದೆ.

ಮೀಸಲಾತಿಯ ಬಗ್ಗೆ ನಿನ್ನ ಅಭಿಪ್ರಾಯವೇನೆಂದು ಆ ಪೋಲೀಸಿನವನನ್ನು ಕೇಳಿದೆ ಜಾತೀಯತೆ ಸ್ವಲ್ಪವೂ ಒಳ್ಳೆಯದಲ್ಲ ಎಂದು ಅವನು ಉತ್ತರಿಸಿದ. 'ಈ ಜಾತೀಯತೆಯಿಂದಲೇ ನಾವು ಸ್ವಾತಂತ್ರ್ಯ ಬಯಸುತ್ತೇವೆ' ಎಂದು ನಾ ಅವನಿಗೆ ಹೇಳಿದೆ. ಆಗ ಆ ಪೋಲೀಸ್ ಹಾಗಾದರೆ ನೀವು ಹೇಳಿದುದರಲ್ಲಿ ಏನು ತಪ್ಪಿಲ್ಲವಲ್ಲ ಎಂದು ಉದ್ಗರಿಸಿದ.

ಅದರಲ್ಲಿ ರಾಷ್ಟ್ರವಿರೋಧಿ ಮಾತು ಇಲ್ಲವಲ್ಲ ಎಂದು ಅಂದ. ನಂತರ ನಾನು ಅವನಿಗೆ ಇನ್ನೊಂದು ಪ್ರಶ್ನೆ ಕೇಳಿದೆ ಈ ವ್ಯವಸ್ಥೆಯಲ್ಲಿ ಗರಿಷ್ಠ ಮಟ್ಟದ ಅಧಿಕಾರವನ್ನು ಯಾರು ಚಲಾಯಿಸುತ್ತಾರೆ? ಆಗ ಅವನು ತನ್ನ ಲಾಠಿ ಕಡೆಗೆ ನೋಡಿದ ಮತ್ತು ದಂಡ ಎಂದು ಅಂದ 'ನಿನ್ನ ಇಚ್ಛೆಯಂತೆ ನಿನ್ನ ಲಾಠಿಯನ್ನು ಚಲಾಯಿಸಬಹುದೇ ಎಂದು ಕೇಳಿದೆ' ಆಗಿಲ್ಲ ಎಂದು ಅವನು ಒಪ್ಪಿದ. ಯಾರ ಬಳಿ ಅತ್ಯಂತ ಹೆಚ್ಚು ಅಧಿಕಾರವಿದೆ ಎಂದು ಕೇಳಿದಾಗ ಅವನ ಉತ್ತರ ಹೀಗಿತ್ತು. 'ಯಾರು ಸುಳ್ಳು ಟ್ವೀಟ್‌ಗಳನ್ನು ಪ್ರಕಟಿಸುತ್ತಾರೊ ಅವರಬಳಿ!'

ನಾವು ಸ್ವಾತಂತ್ರ್ಯ ಬಯಸುತ್ತೇವೆಂದು ಸಂಘಿಗಳು ಸುಳ್ಳು ಟ್ವೀಟ್ ಮಾಡುತ್ತಾರೆಂದು ನಾ ಅವನಿಗೆ ಹೇಳಿದೆ ಆಗ ಪೋಲೀಸ್ 'ನೀವು ಮತ್ತು ನಾನು ಒಂದೇ ಪಕ್ಕಕ್ಕೆ ಇದ್ದೇವೆಂದು ತೋರುತ್ತದೆ' ಹೌದು ಆದರೆ ಒಂದು ಸಣ್ಣ ಸಮಸ್ಯೆ ಇದೆ ಎಂದು ನಾ ಉತ್ತರಿಸಿದೆ.

'ನಾನು ನಿಮಗೆ ಗೌಪ್ಯದಲ್ಲಿ ಒಂದು ಮಾತು ಹೇಳಬಹುದೇ ಎಂದು ಅವನು ಕೇಳಿದ. ನೀವು ಜೈಲಿಗೆ ಬಂದಾದ ಮೇಲೆ ನಿಮ್ಮನ್ನು ಹೊಡೆಯಬೇಕೆಂದು ತೀರ್ಮಾನಿಸಿದ್ದೆ ಏಕೆಂದರೆ ನಿಮ್ಮ ಹೆಸರು ಎಫ್ ಐ ಆರ್ ಅಲ್ಲಿ ಇತ್ತು, ಆದರೆ ನಿಮ್ಮೊಂದಿಗೆ ಮಾತನಾಡಿದ ಮೇಲೆ ಅವರನ್ನು ಹೊಡೆಯಬೇಕೆಂದು ಈಗ ನನಗೆ ಅನಿಸುತ್ತಿದೆ.' ಅವನು ಬಹಳ ಮಹತ್ವದ ಮಾತನ್ನು ಅಂದ. ಇಲ್ಲಿರುವ ಮಾಧ್ಯಮದ ಮೂಲಕ ಇಡೀ ದೇಶದ ಗಮನವನ್ನು ಅದರ ಕಡೆಗೆ, ಆ ಮಾತಿನ ಕಡೆಗೆ ಸೆಳೆಯ ಬಯಸುತ್ತೇನೆ. ಆ ಪೋಲೀಸ ನನ್ನಂತಯೇ ಒಂದು ಸಣ್ಣ ಸಾಧಾರಣ ಕುಟುಂಬದಿಂದ ಬಂದವನಾಗಿದ್ದಾನೆ. ನನ್ನಂತೆಯೇ ಓದಲು ಬಯಸಿದ್ದ; ನನ್ನಂತಯೇ ದೇಶದ ವ್ಯವಸ್ಥೆಯಲ್ಲಿಯ ದೋಷಗಳನ್ನು ತಿಳಿಯಲು ಬಯಸಿದ್ದ. ಮತ್ತು ಅವುಗಳ ವಿರುದ್ಧ ಹೋರಾಡಲು ಬಯಸಿದ್ದ. ಸುಶಿಕ್ಷಿತ ಮತ್ತು ಅಶಿಕ್ಷಿತರ ಮಧ್ಯೆ ಇರುವ ವ್ಯತ್ಯಾಸವನ್ನು

ತಿಳಿಯ ಬಯಸಿದ್ದ. ಆದರೂ ಕೂಡ ಓರ್ವ ಪೋಲೀಸ್ ಆಗಿ ಕೆಲಸ ಮಾಡಿತ್ತಿದ್ದ. ಈ ಸಂದರ್ಭದಲ್ಲಿಯೆ ಜೆ.ಎನ್.ಯು ಬರುತ್ತಾದ್ದರಿಂದಲೇ ನೀವು ಜೆ.ಎನ್.ಯು ನ ಧ್ವನಿಯನ್ನು ಅಡಗಿಸ ಬಯಸುತ್ತೀರಿ. ತನ್ಮೂಲಕ ಬಡ ವ್ಯಕ್ತಿ ಪಿ.ಹೆಚ್.ಡಿ ಪಡೆಯಲು ಸಾಧ್ಯವಾಗಬಾರದೆಂದು ಖಚಿತಮಾಡಿದ್ದೀರಿ. ಪಿ.ಹೆಚ್.ಡಿ ಏಕೆಂದರೆ ಖಾಸಗಿ ಸಂಸ್ಥೆಗಳಲ್ಲಿ ಅಧ್ಯಯನ ಮಾಡಿ ಪಿ.ಹೆಚ್.ಡಿ ಪಡೆಯುವುದು ಬಡವರಿಗೆ ಸಾಧ್ಯವಿಲ್ಲವೆಂಬುದು ಹಗಲು ಬೆಳಲಿನಷ್ಟೇ ಸ್ಪಷ್ಟವಾಗಿದೆ.

ಯಾರು ಒಟ್ಟುಗೂಡುತ್ತಾರೋ ಅವರು ಗಡಿಯಲ್ಲಿ ಇರುವವರು ಆಗಿರಬಹುದು, ಹೊಲದಲ್ಲಿ ಸಾಯುತ್ತಿರುವವರಾಗಿರ ಬಹುದು, ಜೆ.ಎನ್.ಯುನಲ್ಲಿ ಹೋರಾಟದಲ್ಲಿ ಇರುವಂತವರಾಗಿರಬಹುದು ಅಂಥವರೆಲ್ಲರ ಧ್ವನಿಯನ್ನು ಅಡಗಿಸಲು ಅವರು ಬಯಸುತ್ತಾರೆ. ಈ ಧ್ವನಿಗಳೆಲ್ಲ ಒಟ್ಟಿಗೆ ಬರಬಾರದೆಂಬುದೇ ಅವರ ಆಶೆಯವಾಗಿದೆ ಬಾಬಾ ಸಾಹೇಬ್ ಏನು ಹೇಳಿದ್ದರೆಂಬುದನ್ನು ಜ್ಞಾಪಿಸಬಯಸುತ್ತೇನೆ 'ಕೇವಲ ರಾಜಕೀಯ ಪ್ರಜಾಪ್ರಭುತ್ವ ಸಾಲದು' ನಾವು ಸಮಾಜಿಕ ಪ್ರಜಾಪ್ರಭುತ್ವವನ್ನು ಸ್ಥಾಪಿಸುತ್ತೇವೆ. ಆದ್ದರಿಂದಲೇ ಸಂವಿಧಾನದ ಬಗ್ಗೆ ಪದೇ ಪದೇ ಮಾತನಾಡುತ್ತೇವೆ. 'ಸಮಾಜವಾದಕ್ಕಾಗಿ ಪ್ರಜಾಪ್ರಭುತ್ವ ಅನಿವಾರ್ಯ' ಎಂದು ಲೆನಿನ್ ಹೇಳಿದ್ದ. ನಾವು ಪ್ರಜಾಪ್ರಭುತ್ವದ ಬಗ್ಗೆ, ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ, ಸಮಾನತೆ ಮತ್ತು ಸಮಾಜವಾದದ ಬಗ್ಗೆ ಮಾತನಾಡುತ್ತೇವೆ. ಏಕೆಂದರೆ ಓರ್ವ ಜವಾನನ ಮಗ ಮತ್ತು ಅಧ್ಯಕ್ಷನ ಮಗ ಒಟ್ಟಿಗೆ ಅಧ್ಯಯನ ಮಾಡುವಂಥ ಕಾಲ ಬರಬೇಕು.

ಈ ಪ್ರಕಾರದ ಹೋರಾಟದ ಧ್ವನಿಯನ್ನು ಅವರು ಅಡಗಿಸ ಬಯಸುತ್ತಾರೆ. ವಿಜ್ಞಾನದ ಪ್ರಕಾರ ನೀವು ಯಾವುದೇ ಪದಾರ್ಥವನ್ನು ಒತ್ತಿ ಹಿಡಿದಾಗ ಅದು ಹೆಚ್ಚು ಒತ್ತಡದಿಂದ ಮೇಲಕ್ಕೆ ನೆಗೆಯುತ್ತದೆ. ಆದರೆ ಈ ಜನಕ್ಕೆ ವಿಜ್ಞಾನದ ಪರಿವೇ ಇಲ್ಲ. ಏಕೆಂದರೆ ವಿಜ್ಞಾನ ಮತ್ತು ವೈಜ್ಞಾನಿಕತೆ ಒಂದೇ ಅಲ್ಲ. ಒಂದು ವೇಳೆ ವೈಜ್ಞಾನಿಕ ಪರಿಸರವನ್ನು ನಿರ್ಮಿಸುವುದರಲ್ಲಿ ತೊಡಗಿದ ಜನರೊಂದಿಗೆ ಚರ್ಚೆ ನಡೆಯುವುದಾದರೆ ಯಾವ ಸ್ವಾತಂತ್ರ್ಯಗಳಿಗಾಗಿ ಹೋರಾಡುತ್ತಿದ್ದೇವೆಯೋ ಅವುಗಳನ್ನು ನಾವು ಖಂಡಿತವಾಗಿ ಈ ದೇಶದಲ್ಲಿಯೇ ಪಡೆಯಬಹುದಾಗಿದೆ. ಹಸಿವು ಮತ್ತು ಬಡತನ, ಶೋಷಣೆ ಮತ್ತು ಅನ್ಯಾಯ ಮತ್ತು ದಲಿತರಿಗಾಗಿ, ಆದಿವಾಸಿಗಳಿಗಾಗಿ. ಸ್ತ್ರೀಯರು ಮತ್ತು ಅಲ್ಪಸಂಖ್ಯಾತರಿಗಾಗಿ ಅಧಿಕಾರ. ಇದೇ ಪಾರ್ಲಿಮೆಂಟ್ ಮತ್ತು ನ್ಯಾಯ ಪ್ರಕ್ರಿಯೆ ನಮ್ಮ ಕನಸು. ಇದು ಬಾಬಾ ಸಾಹೇಬರ ಕನಸಾಗಿತ್ತು ಇದು ನಮ್ಮ ಸಹ ಸ್ನೇಹಿತ ರೋಹಿತ್ ನ ಕನಸಾಗಿತ್ತು.

ಈಗೇನಾಗಿದೆ ? ನೀವು ಒಬ್ಬ ರೋಹಿತ್‌ನನ್ನು ಸಾಯಿಸಿದಿರಿ. ಅದರ ಪರಿಣಾಮವಾಗಿ ಹುಟ್ಟಿದ ಚಳುವಳಿಯನ್ನು ಅದುಮಲು ಪ್ರಯತ್ನಿಸಿದಿರಿ. ಈಗ ಅದು ಎಷ್ಟೊಂದು ದೊಡ್ಡ ಚಳುವಳಿಯಾಗಿದೆ, ನೋಡಿ.

ನನ್ನ ಜೈಲುವಾಸದ ಅನುಭವದಿಂದ ಇನ್ನೊಂದು ವಿಷಯ ಹೇಳಬಯಸುತ್ತೇನೆ.

ಇದು ನನ್ನ ಆತ್ಮವಿಮರ್ಶೆ ಮತ್ತು ಅದು ನಿಮಗೂ ಕೂಡ ಅನ್ವಯಿಸುತ್ತದೆಂದರೆ ಅದನ್ನು ಅದೇ ಮನೋಭಾವನೆಯಿಂದ ಸ್ವೀಕರಿಸಿ. ಜೆ.ಎನ್.ಯುನಲ್ಲಿರುವ ನಾವು ನಮ್ಮ ಮಾತಿನಲ್ಲಿ ಹೊಸತನ ಉಳ್ಳವರು. ಮತ್ತು ನಾಗರೀಕತೆ ಉಳ್ಳವರು. ಆದರೆ ನಾವು ಕಟುಭಾಷೆಯಲ್ಲಿ ಮಾತನಾಡುತ್ತೇವೆ. ಅದನ್ನು ನಮ್ಮ ದೇಶದ ಸಾಮಾನ್ಯ ಜನರು ಅರ್ಥಮಾಡಿಕೊಳ್ಳಲು ಅಸಮರ್ಥರಾಗಿದ್ದಾರೆ. ಅದು ಅವರ ತಪ್ಪಲ್ಲ. ಅವರು ಪ್ರಾಮಾಣಿಕರು, ನೇರ ನಡೆ ನುಡಿ ಉಳ್ಳವರು, ಮತ್ತು ಅರ್ಥಮಾಡಿಕೊಳ್ಳಲು ಪೂರ್ಣ ಸಮರ್ಥರೂ ಆಗಿದ್ದಾರೆ. ಅವರ ಮಟ್ಟಕ್ಕೆ ಅವರಿಗೆ ವಿವರಿಸಿ ಹೇಳಲು ನಾವು ಅಸಮರ್ಥರಾಗಿದ್ದೇವೆ. ಅಂತಿಮವಾಗಿ ಅವರಿಗೆ ಏನು ತಲುಪುತ್ತದೆ? ಅವರಲ್ಲಿ ಪೂರ್ವಾಪರ ಪರಿಶೀಲನೆ ಇರುವುದಿಲ್ಲ. ಓ.ಎಲ್.ಎಕ್ಸ್‌ನಲ್ಲಿ ಮಾರಾಟಮಾಡುವುದಷ್ಟೆ ಮಾತುಕತೆಯನ್ನು ಮತ್ತು ಚರ್ಚೆಯನ್ನು ಏರ್ಪಡಿದುವುದು ಅಗತ್ಯವಾಗಿದೆ. ದೇಶದಲ್ಲಿ ಉಂಟಾಗಿರುವ 'ಮಾರಾಟ' ಮನೋಭಾವನೆಗಾಗಿ ಇದು ಅಗತ್ಯ.

ಈಗ ನಾನು ನನ್ನ ಜೈಲು ಅನುಭವ ಮಾತನಾಡುತ್ತೇನೆ. ಅಲ್ಲಿ ನನಗೆ ಎರಡು ಬಟ್ಟಲುಗಳನ್ನು ಕೊಟ್ಟಿದ್ದರು. ಒಂದು ನೀಲಿ ಬಣ್ಣದ್ದಾಗಿತ್ತು, ಇನ್ನೊಂದು ಕೆಂಪು. ನಾನು ಬಣ್ಣದ ಕಡೆಗೆ ನೋಡುತ್ತಾ ಇದ್ದೆ. ಆಗ ನಾನು ಯೋಚನೆ ಮಾಡಿದೆ, ನಾನು ಅದೃಷ್ಟವನ್ನು ನಂಬುವವನಲ್ಲ ಅಥವಾ ನನಗೆ ದೇವರು ಗೊತ್ತಿಲ್ಲ. ಆದರೆ ಈ ದೇಶದಲ್ಲಿ ಖಂಡಿತವಾಗಿ ಒಳ್ಳೆಯದು ಆಗುವುದಿದೆ. ಈ ಎರಡು ಬಣ್ಣಗಳನ್ನು ಅಕ್ಕ ಪಕ್ಕ ಇಟ್ಟಾಗ ಅವುಗಳನ್ನು ಇಟ್ಟಿದ್ದ ತಟ್ಟೆ ನಮ್ಮ ಭಾರತದಂತೆ ಕಂಡಿತು ನೀಲಿ ಬಣ್ಣ ಅಂಬೇಡ್ಕರ್ ಅನುಯಾಯಿಗಳ ಚಳುವಳಿದು ಮತ್ತು ಕೆಂಪನೆಯದು ಸಮಾಜವಾದದ್ದು. ಒಂದು ವೇಳೆ ಇವುಗಳಲ್ಲಿ ಒಗ್ಗಟ್ಟು ಸಾಧಿತವಾದರೆ ಈ ದೇಶದಲ್ಲಿ ಇನ್ನು ಯಾವ ಸಮಸ್ಯೆಯೂ ಇರುವುದಿಲ್ಲ. ಯಾರು ಎಲ್ಲರಿಗಾಗಿ ಕಾನೂನನ್ನು ರಚಿಸುತ್ತಾರೊ ಅಂಥವರನ್ನು ನಾವು ಅಧಿಕಾರದಲ್ಲಿ ಕೂರಿಸುತ್ತೇವೆ. ಎಲ್ಲರೊಂದಿಗೆ ಎಲ್ಲರ ವಿಕಾಸ ಎಂಬ ಕೂಗನ್ನು ಕೂಗುತ್ತೇವೆ.

ಇದನ್ನು ಕೂಡ ನಮ್ಮ ಗೌರವಾನ್ವಿತ ಪ್ರಧಾನಮಂತ್ರಿಯವರು ತಮ್ಮದನ್ನಾಗಿ ಮಾಡಿಕೊಳ್ಳುತ್ತಾರೆ. ದೂರದರ್ಶನವನ್ನು ಪ್ರವೇಶಿಸಬೇಕೆಂಬ ಒತ್ತಾಸೆ ನನ್ನಲ್ಲಿದೆ. 'ಮೋದಿಜಿ ಹಿಟ್ಲರ್ ನ ಬಗ್ಗೆ ಸ್ವಲ್ಪ ಏಕೆ ಮಾತನಾಡುವುದಿಲ್ಲ ಹಿಟ್ಲರ್ ಬಗ್ಗೆ ಅಲ್ಲದಿದ್ದರೆ ಮುಸೊಲಿನಿ ಬಗ್ಗೆಯಾದರೂ ಮಾತನಾಡಿ. ಅವರ ಕಪ್ಪು ಬಣ್ಣದ ಟೋಪಿಯಂಥದನ್ನೇ ನಿಮ್ಮ ಗುರೂಜಿ ಧರಿಸಿದ್ದರು.' ಗೋಲ್ವಾಲ್‌ಕರ್‌ಜಿ ಮುಸೊಲಿನಿ ಭೇಟಿಮಾಡಲು ಹೋಗಿದ್ದರು. ಆಗ ಮುಸೊಲಿನಿ ಭಾರತೀಯತೆಯ ವ್ಯಾಖ್ಯೆಯನ್ನು ಜರ್ಮನ್ ರೀತಿಯಲ್ಲಿ ರಚಿಸಲು ಗೋಲ್ವಾಲ್‌ಕರ್ ಹೇಳಿದರು.

ಈಗ ನಾನು ನನ್ನ ಅತಿ ಖಾಸಗೀ ವಿಷಯಕ್ಕೆ ಬರುತ್ತೇನೆ. ನನ್ನ ತಾಯಿಯೊಂದಿಗೆ ಮೂರುತಿಂಗಳ ನಂತರ ಮಾತನಾಡಿದೆ. ಜೆ.ಎನ್.ಯುನಲ್ಲಿದ್ದಾಗ ಹೆಚ್ಚು ಸಂಪರ್ಕದಲ್ಲಿರಲಿಲ್ಲ. ಜೈಲಿಗೆ ಹೋದನಂತರ ಸತತ ಸಂಪರ್ಕದಲ್ಲಿರಬೇಕೆಂದು ಅನಿಸಿತು.

ನೀವೂ ಕೂಡ ಹಾಗೆ ಮಾಡಬೇಕೆಂದು ನಾ ಹೇಳುತ್ತೇನೆ. ನನ್ನ ತಾಯಿಯೊಂದಿಗೆ ಮಾತನಾಡಿದಾಗ ನಾನು ಅವಳನ್ನು ಕೇಳಿದೆ 'ಮೋದೀಜಿ ಅವರೊಂದಿಗೆ ಜಗಳವಾಡುತ್ತೀರ' ? ಅದಕ್ಕೆ ತಾಯಿ ಅಂದಳು 'ಅದು ಜಗಳವಲ್ಲ ಬೇರೆಯವರನ್ನು ಕುರಿತು ತಮಾಷೆ ಮಾಡುವುದು ಅವರ ಹಕ್ಕು ನಾವು ನಮ್ಮ ನೋವನ್ನು ವ್ಯಕ್ತಪಡಿಸುತ್ತೇವಷ್ಟೆ. ಯಾರಿಗೆ ಅರ್ಥವಾಗುತ್ತೋ ಅವರು ಅಳುತ್ತಾರೆ. ಯಾರಿಗೆ ಅರ್ಥವಾಗುವುದಿಲ್ಲವೊ ಅವರು ನಗುತ್ತಾರೆ. ನನ್ನ ನೋವಿನಿಂದಾಗಿ ಮೋದೀಜಿ ಕೂಡ ಒಬ್ಬ ತಾಯಿಯ ಮಗನೆಂದು ಹೇಳುವಂತೆ ಮಾಡಿತು. ನನ್ನ ಮಗನ ಮೇಲೆ ತಪ್ಪಾಗಿ ದೇಶದ್ರೋಹದ ಆಪಾದನೆ ಹೊರಿಸಿದ್ದಾರೆ. ಮೋದೀಜಿ ಅವರು 'ಮನದ ಮಾತು' ಮಾತನಾಡಿದ್ದಾಗ ತಾಯಿಯ ಮಾತು ಎಂಬುದನ್ನು ಏಕೆ ಮಾತನಾಡುವುದಿಲ್ಲ.

ತಾಯಿಗೆ ಸಮಾಧಾನದ ಯಾವ ಮಾತನ್ನು ಹೇಳದ? ಈಗ ನಮ್ಮ ದೇಶದಲ್ಲಿ ಆಗುತ್ತಿರುವುದೆಲ್ಲವೂ ಒಂದು ಅಪಾಯದ ಸೂಚನೆಯನ್ನು ಕೊಡುತ್ತಿದೆ. ನಾನು ಇಲ್ಲಿ ಯಾವುದೇ ಒಂದು ಪಕ್ಷದ ಬಗ್ಗೆಯಾಗಲಿ ಅಥವಾ ಮಾಧ್ಯಮದ ಬಗ್ಗೆಯಾಗಲಿ ಮಾತನಾಡುತ್ತಿಲ್ಲ. ಅಥವಾ ಸೈನಿಕರ ಬಗ್ಗೆ ಮಾತನಾಡುತ್ತಿಲ್ಲ. ಇಡೀ ದೇಶವನ್ನೇ ಕಲ್ಪಿಸಿಕೊಂಡು ಮಾತನಾಡುತ್ತಿದ್ದೇನೆ. ಜನರಿಲ್ಲದಂತೆ ದೇಶವನ್ನು ಖಾಲಿಮಾಡಿದರೆ ಅದು ಹೇಗೆ ಕಾಣುತ್ತದೆ ಆದ್ದರಿಂದ ಜೆ.ಎನ್.ಯುಗೆ ಬೆಂಬಲವಾಗಿ ನಿಂತ ಎಲ್ಲ ಜನರಿಗೂ ನಾನು ವಂದನೆ ಹೇಳುತ್ತೇನೆ. ಜೆ.ಎನ್.ಯು ನ ಮಹತ್ವವನ್ನು ಅವರು ತಿಳಿದಿದ್ದಾರೆ. ಅದರ ವಿದ್ಯಾರ್ಥಿಗಳಲ್ಲಿ ಶೇಕಡ ೬೦ ರಷ್ಟು ಹೆಣ್ಣು ಮಕ್ಕಳಿದ್ದಾರೆ. ಯಾವುದೇ ಲೋಪದೋಷವಿದ್ದರೂ ಮೀಸಲಾತಿ ನೀತಿಯನ್ನು ಸಮರ್ಥಿಸುವ ಕೆಲವೇ ಸಂಸ್ಥೆಗಳಲ್ಲಿ ಜೆ.ಎನ್.ಯು ಒಂದಾಗಿದೆ. ಮತ್ತು ಆ ನೀತಿಯನ್ನು ಜಾರಿಗೆ ಕೊಡುವಂಥದ್ದಾಗಿದೆ. ಆ ನೀತಿ ಜಾರಿಗೆ ಬರದೇ ಇರುವ ಕಡೆ ನಾವು ಅದಕ್ಕಾಗಿ ಹೋರಾಟ ಮಾಡುತ್ತೇವೆ.

ನಿಮಗೆ ಇದುವರೆಗೆ ಒಂದು ವಿಷಯ ಹೇಳಿಲ್ಲ. ನನ್ನ ಮನೆಯವರು ಮೂರು ಸಾವಿರ ರುಪಾಯಿಗಳಲ್ಲಿ ಜೀವನ ನಡೆಸುತ್ತಾರೆ. ದೊಡ್ಡ ವಿಶ್ವವಿದ್ಯಾಲಯದಲ್ಲಿ ಪಿ.ಹೆಚ್.ಡಿ ಮಾಡಲು ನನಗೆ ಸಾಧ್ಯವಿತೆಗ? ಆದ್ದರಿಂದ ಜೆ.ಎನ್.ಯು ಮೇಲೆ ಗಂಭೀರವಾದ ದಾಳಿ ನಡೆದಾಗ ಅದರ ಪರವಾಗಿ ನಿಂತ ಜನರನ್ನೂ ಕೂಡ ಅದೇ ಬಣ್ಣದಲ್ಲಿ ಅದ್ದುತ್ತಾರೆ. ಈ ಮಾತನ್ನು ಹೇಳುವಾಗ ಯಾವುದೇ ಒಂದು ರಾಜಕೀಯ ಪಕ್ಷದ ಬಗ್ಗೆ ಸಹಾನುಭೂತಿ ತೋರಿಸುತ್ತಿಲ್ಲ. ಏಕೆಂದರೆ ನನಗೆ ನನದೇ ಆದ ಸೈದ್ಧಾಂತಿಕ ದಾರಿ ಇದೆ. ಸೀತಾರಾಂ ಎಚೂರಿ ದೇಶ ದ್ರೋಹದ ಆಪಾದನೆಗೆ ಒಳಗಾಗಿದ್ದಾರೆ. ರಾಹುಲ್ ಗಾಂಧಿ, ಮತ್ತು ಡಿ.ರಾಜ ಮತ್ತು ಕೇಜ್ರಿವಾಲ್ ಕೂಡ. ಮಾಧ್ಯಮದಲ್ಲಿ ಇರುವವರಲ್ಲಿ ಯಾರು ಜೆ.ಎನ್.ಯು ಪರ ಮಾತನಾಡುತ್ತಾರೊ ಅವರು ವಾಸ್ತವವಾಗಿ ಜೆ.ಎನ್.ಯು ಬಗ್ಗೆ ಮಾತನಾಡುತ್ತಿಲ್ಲ ಬದಲಿಗೆ ಸತ್ಯವನ್ನು ಸತ್ಯವಾಗಿ ಮಾತನಾಡುತ್ತಿದ್ದಾರೆ ಮತ್ತು ತಪ್ಪನ್ನು ತಪ್ಪೆಂದು ಹೇಳುತ್ತಿದ್ದಾರೆ. ಅವರನ್ನೂ ಕೂಡ ಜೈಲಿಗೆ ಅಟ್ಟಲಾಗುತ್ತಿದೆ

ಮತ್ತು ಭಯಪಡಿಸಲಾಗುತ್ತಿದೆ.

ತಾವೇ ಹುಟ್ಟಿಸಿದ ರಾಷ್ಟ್ರೀಯತೆ ಎಲ್ಲಿಂದ ಬರುತ್ತಲಿದೆ? ಜೈಲಿನಲ್ಲಿ ಕೆಲವರು ಈ ಮಾತನ್ನು ಕೇಳಿದರು. ನಾನು ನಿಜವಾಗಿಯೂ ಆ ಘೋಷಣೆಯನ್ನು ಕೂಗಿದೆನೆ ಎಂದು ಕೇಳಿದರು. ನಾನು ಹೌದೆಂದು ಹೇಳಿದೆ, ಹಾಗೆ ಪುನಃ ಕೂಗುವೆನೆಂದೂ ಹೇಳಿದೆ.

ಅಧಿಕಾರದಲ್ಲಿರುವಂಥವರಿಗೆ ನನ್ನ ಪ್ರಶ್ನೆ ಏನೆಂದರೆ ಇವುಗಳಲ್ಲಿಯ ವ್ಯತ್ಯಾಸ ಗೊತ್ತಾಗುತ್ತದೆಯೇ ಅಥವಾ ನಿಮ್ಮ ವಿಮರ್ಶಾಬುದ್ಧಿ ಹಾಳಾಗಿದೆಯೆ? ದೇಶದ ಶೇಕಡ ೬೯ ರಷ್ಟು ಜನರು ಈ ಪ್ರಕಾರದ ಮನೋಭೂಮಿಕೆ ವಿರುದ್ಧ ಮತ ಚಲಾಯಿಸಿದ್ದಾರೆ. ಕೇವಲ ಶೇಕಡ ೩೧ ರಷ್ಟು ಜನರು ಮಾತ್ರ ನಿಮ್ಮ ಪರವಾಗಿ ಮತ ಚಲಾಯಿಸಿದ್ದಾರೆ ಅವರಲ್ಲಿ ಕೆಲವರು ನಿಮ್ಮ ಘೋಷಣೆಗಳನ್ನು ತಮ್ಮದನ್ನಾಗಿಸಿಕೊಂಡಿದ್ದಾರೆ. ನಿಮ್ಮ ಹರಹರ ಘೋಷಣೆಯ ಮೂಲಕ ಕೆಲವರನ್ನು ಮೋಹಿತಗೊಳಿಸಿಕೊಂಡಿದ್ದೀರಿ. ಇಂದಿನ ದಿನಗಳಲ್ಲಿ ಅದಕ್ಕಾಗಿ ತೊಗರೀ ಬೇಳೆಗೆ ಎಷ್ಟು ಬೆಲೆ ತೆತ್ತಬೇಕಾಗಿದೆ ಎಂಬುದನ್ನು ಹೇಳುತ್ತೀರಿ.

ನಿಮ್ಮ ಜಯ ಅಂತಿಮ ಎಂದು ನಿಮ್ಮನ್ನು ನೀವು ಮೋಸಮಾಡಿಕೊಳ್ಳಬೇಡಿ. ಸೂರ್ಯನೇ ಚಂದಿರ ಎಂದು ನೀವು ನೂರುಸಲ ಹೇಳಿದರೆ ಆ ಸೂರ್ಯ ಚಂದ್ರನಾಗುವನೇ? ಖಂಡಿತ ಇಲ್ಲ ಅದೇನಿದೆಯೋ ಅದು ಇರುತ್ತದೆ. ನೀವು ಸಾವಿರ ಸಲ ಸುಳ್ಳು ಹೇಳಿದರೂ ಅದು ಹಾಗೆ ಇರುತ್ತದೆ.

ಪಾರ್ಲಿಮೆಂಟಿನಲ್ಲಿ ಗಮನ ಸೆಳೆಯುವ ಸೂಚನೆಯನ್ನು ಮಂಡಿಸುತ್ತಾರೆ. ಆದರೆ ಲೋಕಸಭೆಯ ಹೊರಗೆ ದೇಶಾದ್ಯಂತ ಜನರ ಗಮನವನ್ನು ಬೇರೆ ಕಡೆ ಸೆಳೆಯುತ್ತಾರೆ ಇದೆ ಪಾರ್ಲಿಮೆಂಟಿನ ವಿಶೇಷತೆ! ಜನರ ನಿಜವಾದ ಸಮಸ್ಯೆಯ ಕಡೆಯಿಂದ ಅವರ ಗಮನ ಬೇರೆಕಡೆ ಹೋಗುವಂತೆ ಮಾಡುತ್ತಾರೆ. ಮತ್ತು ಬೇರೊಂದು ಹೊಸ ವಿಷಯಗಳಲ್ಲಿ ಖಾಯಂ ಆಗಿ ಬಲೆಗೆ ಬೀಳಿಸುತ್ತಾರೆ. ಇಲ್ಲಿ ಯು.ಜಿ.ಸಿ ಆಕ್ರಮಿಸಿ ಎಂಬ ಚಳುವಳಿ ನಡೆಯುತ್ತಿತ್ತು; ಕಾಮ್ರೆಡ್ ರೋಹಿತ್ ಸಾಯಿಸಲ್ಪಟ್ಟ. ನಾವು ಅವನ ಪರವಾಗಿ ಧ್ವನಿ ಎತ್ತಿದ ಕೂಡಲೇ ಹೊಸ ಬಗೆಯ ದೇಶದ ಗೌರವದ ಮಾತುಗಳು ಕೇಳಿಬಂದವು. ದೇಶದ್ರೋಹದ ಮಾತು ಬಂತು. ಇದೂ ಕೂಡ ಬೇಗ ತನ್ನ ಮಹತ್ವ ಕಳೆದುಕೊಳ್ಳುವುದು.

ಈಗ ಅವರು ಮುಂದಿನ ಹೆಜ್ಜೆಯ ಬಗ್ಗೆ ಯೋಜನೆ ಮಾಡುತ್ತಿದ್ದಾರೆ. ರಾಮ ಮಂದಿರದ ಮಾತಲ್ಲದೆ ಇನ್ನೇನು. ಕಾರಾಗೃಹದಿಂದ ನಾನು ಹೊರಬರುವ ಮೊದಲು ಒಬ್ಬ ಪೋಲೀಸಿನ ಜೊತೆಗೆ ಮಾತನಾಡಿದ್ದನ್ನು ಹೇಳುತ್ತೇನೆ.

ಪೋಲೀಸ್ ಕೇಳಿದ! ನಿನಗೆ ಧರ್ಮದಲ್ಲಿ ನಂಬಿಕೆ ಇದೆಯೇ?

ನಾನು : ಧರ್ಮದಲ್ಲಿ ನಂಬಿಕೆ ಇಡುವುದಾದರೆ ನಾನು ಧರ್ಮದಬಗ್ಗೆ ತಿಳಿದುಕೊಳ್ಳಬೇಕು.

ಅವನು : ನೀನು ಯಾವುದಾದರೊಂದು ಕುಟುಂಬದಲ್ಲಿ ಜನಿಸಿರಬೇಕಲ್ಲವೆ ?

ನಾನು : ಅಕಸ್ಮಾತ್ತಾಗಿ ನಾನು ಹಿಂದೂ ಕುಟುಂಬದಲ್ಲಿ ಹುಟ್ಟಿದೆ, ಹಾಗಾದರೆ ಧರ್ಮದಬಗ್ಗೆ ಗೊತ್ತಿದೆಯೆ ?

ನಾನು : ನನಗೆ ಗೊತ್ತಿರುವ ಸ್ವಲ್ಪ ತಿಳುವಳಿಕೆಯಂತೆ ದೇವರು ಈ ಭೂಮಿಯನ್ನು ನಿರ್ಮಿಸಿದ ಮತ್ತು ಪ್ರತಿಯೊಂದು ಚಿಕ್ಕ ಅಣುವಿನಲ್ಲೂ ಅವನು ಇದ್ದಾನೆ. ನೀನೇನು ಹೇಳುತ್ತಿ?

ಅವನು : ಸಂಪೂರ್ಣವಾಗಿ ಸರಿ.

ನಾನು : ಕೆಲವರು ದೇವರಿಗೆ ಏನನ್ನಾದರು ನಿರ್ಮಿಸಬೇಕೆಂದು ಬಯಸುತ್ತಾರೆ. ಇದರ ಬಗ್ಗೆ ನೀನು ಏನು ಹೇಳುತ್ತೀ? ಇದು ಹುಚ್ಚುತನದ ಅತಿರೇಕ.

ನೀವು ಜನರನ್ನು ಸದಾಕಾಲ ಮೋಸ ಮಾಡಲಾರಿರಿ. ನೀವು ಹೇಳುವ ವಿಷಯ ಅದು ತನ್ನ ಬೆಲೆಯನ್ನು ಕಳೆದುಕೊಂಡಿದೆ. ನಿಮ್ಮ ಮೋಸದಾಟ ಎಂಭತ್ತರಿಂದ ನೂರಎಂಭತ್ತು ಸ್ಥಾನಗಳನ್ನು ಪಡೆಯುವಂತೆ ಮಾಡಿತು. ಇನ್ನು ಮೇಲೆ ಇಲ್ಲ. ಏಕೆಂದರೆ ಮಹತ್ವ ಬದಲಾಗಿದೆ ಆದರೂ ಕೂಡ ಜನರ ಗಮನವನ್ನು ಬೇರೆಡೆ ಹೋಗುವಂತೆ ಮಾಡುವ ನಿಮ್ಮ ಪ್ರಯತ್ನವನ್ನು ನೀವು ಬಿಡುವುದಿಲ್ಲ. ಜನರು ನಿಜವಾದ ಸಂಗತಿ ಎತ್ತುವುದು ಅವರಿಗೆ ಬೇಕಿಲ್ಲ.

ಇಲ್ಲಿ ಕುಳಿತಿರುವ ನಿಮ್ಮೆಲ್ಲರಿಗೂ ಹೊಡೆತ ಬಿದ್ದಿರುವಂತೆ ಅನಿಸುತ್ತಿದೆ. ನಿಜ. ಆದರೆ ಇಂಥದು ಇದೇ ಮೊದಲಲ್ಲ ಆರ್.ಎಸ್.ಎಸ್ ನ ಮುಖವಾಣಿಯಾದ ಆರ್ಗನೈಸರ್ ಪತ್ರಿಕೆಯ ಮುಖಪುಟದ ಕಥೆಯ ಕಡೆಗೆ ನಿಮ್ಮ ಗಮನ ಸೆಳೆಯ ಬಯಸುತ್ತೇನೆ. ಆ ಕಥೆ ಜೆ.ಎನ್.ಯು ಬಗ್ಗೆ ಇದೆ. ಅದನ್ನು ಬರೆದವರು ಸುಬ್ರಮಣಿಯಂ ಸ್ವಾಮಿ. ನನಗೆ ಪ್ರಜಾಪ್ರಭುತ್ವದಲ್ಲಿ ಪೂರ್ಣನಂಬಿಕೆ ಇದೆ. ಎ.ಬಿ.ವಿ.ಪಿಯಲ್ಲಿರುವ ನನ್ನ ಸ್ನೇಹಿತರು ಈ ಮಾತನ್ನು ಕೇಳುತ್ತಿದ್ದರೆ ಸ್ವಾಮೀಜಿಯವರನ್ನು ಇಲ್ಲಿಗೆ ಕರೆದುಕೊಂಡು ಬರಬೇಕೆಂದು ಅವರನ್ನು ವಿನಂತಿಸುತ್ತೇನೆ. ಅವರು ಇಲ್ಲಿಗೆ ಬಂದರೆ ವಿಷಯವನ್ನು ಚರ್ಚಿಸಬಹುದು. ಅವರು ತಮ್ಮ ತರ್ಕದಮೂಲಕ ಜೆ.ಎನ್.ಯು ಅನ್ನು ನಾಲ್ಕು ತಿಂಗಳುಗಳಕಾಲ ಮುಚ್ಚಬೇಕೆಂದು ಸಿದ್ಧಮಾಡುವುದಾದರೆ ನಾನು ಅವರೊಂದಿಗೆ ಹೃದಯ ಪೂರ್ವಕವಾಗಿ ಒಪ್ಪುತ್ತೇನೆ ಹಾಗಿಲ್ಲವಾದರೆ ಅವರು ದೇಶಬಿಟ್ಟು ಹೋಗಬೇಕೆಂದು ಅವರನ್ನು ವಿನಂತಿಸುತ್ತೇನೆ. ಈ ಮೊದಲು ಕೆಲವು ಸಂದರ್ಭಗಳಲ್ಲಿವರು ಅ ಮಾಡಿದ ರೀತಿಯಲ್ಲಿ.

ಈ ದಾಳಿಗಳ ಹಿಂದೆ ಬಹಳಷ್ಟು ಯೋಜನೆಗಳು ಇವೆ. ನೀವು ಕ್ಯಾಂಪಸ್‌ನ ಒಳಗೆ ಇರುವುದರಿಂದ ಅದನ್ನು ನೋಡಲಾರಿರಿ. ಮೊದಲ ದಿನದಿಂದಲೇ ಯೋಜನೆ ಸಿದ್ಧವಾಗಿತ್ತು. ಪೋಸ್ಟರ್‌ಗಳನ್ನು ಬದಲಾಯಿಸಬೇಕೆಂದು ಕೂಡ ಅವರು ಯೋಚನೆ ಮಾಡುವುದಿಲ್ಲ. ಹಿಂದೂ ಕ್ರಾಂತಿಸೇನೆ ಉಪಯೋಗಿಸಿದ್ದ ಭಾಷೆಯನ್ನೇ ಎ.ಬಿ.ವಿ.ಪಿ ಉಪಯೋಗಿಸಿದೆ. ಇದೆಲ್ಲವೂ ನಾಗಪುರದಲ್ಲಿ ಯೋಜಿಸಲ್ಪಟ್ಟಿತೆಂದು ತೋರುತ್ತದೆ.

ಸ್ನೇಹಿತರೇ, ಇದು ಸ್ವಯಂ ಸ್ಫೂರ್ತಿಯಿಂದ ಹುಟ್ಟಿದ್ದಲ್ಲ. ಒಂದು ಮುಖ್ಯವಾದ ಗುರಿ ಇದೆ. ಎಲ್ಲಲ್ಲಿ ವಿರೋಧದ ಧ್ವನಿ ಹೇಳುತ್ತದೊ ಅದನ್ನು ಹತ್ತಿಕ್ಕಿ; ಜನರು ತಮ್ಮ ಮೂಲಭೂತ ಸಮಸ್ಯೆಗಳ ಬಗ್ಗೆ ಯೋಚನೆ ಮಾಡಲು ಪ್ರಾರಂಭಿಸಿದ ಕೂಡಲೆ ಅವರ ಗಮನವನ್ನು ಬೇರೆ ಕಡೆ ಸೆಳೆಯಬೇಕು. ಜೆ.ಎನ್.ಯು ಕ್ಯಾಂಪಸ್‌ನಲ್ಲಿ ಪ್ರತಿಭಟನೆ ತಲೆ ಎತ್ತಿದ ಕೂಡಲೆ ಅದು ಅಮೀರ್‌ಬಾನ್ ಭಟ್ಟಾಚಾರ್ಯನಾಗಿರಬಹುದು ಅಥವಾ ಉಮರ್ ಖಲೀದ್ ಆಗಿರಬಹುದು, ಅಶುತೋಷ್ ಆಗಿರಬಹುದು ಅಥವಾ ನಿಮ್ಮಲ್ಲಿಯ ಯಾರದ್ದಾದರೂ ಆಗಿರಬಹುದು. ಆ ಪ್ರತಿಭಟನೆಯನ್ನ ರಾಷ್ಟ್ರವಿರೋಧಿ ಎಂದು ಹೇಳತಕ್ಕದ್ದು. ಹಾಗೂ ಜೆ.ಎನ್.ಯು ಗೆ ಬೆಲೆ ಇಲ್ಲದಂತೆ ಮಾಡುವುದು. ನೀವು ಈ ಹೋರಾಟವನ್ನು ಅದುಮಿ ಇಡಲಾರಿರಿ ಎಂದು ಅವರಿಗೆ ಹೇಳುತ್ತೇನೆ. ನೀವು ಅದನ್ನು ಅದುಮಿಡಲು ಪ್ರಯತ್ನಿಸಿದಷ್ಟೂ ಅದು ಹಿಂದಕ್ಕೆ ಚಿಮ್ಮುವುದು. ನಾವು ನಮ್ಮ ವಿಚಾರದ ನೆಲಯಲ್ಲಿ ನಿಂತುಕೊಳ್ಳುವೆವು. ಇದು ಧೀರ್ಘ ಹೋರಾಟ. ಎಲ್ಲೂ ನಿಲ್ಲದೆ ಅದನ್ನು ನಾವು ಮುಂತೆಗೆದುಕೊಂಡು ಹೋಗಬೇಕು. ಬಾಗದೆ, ಉಸಿರು ತೆಗೆದುಕೊಳ್ಳಲು ನಿಲ್ಲದೆ ಮುಂದಕ್ಕೆ ಹೋಗಬೇಕು. ಕ್ಯಾಂಪಸ್‌ನಲ್ಲಿರುವ ಎ.ಬಿ.ವಿ.ಪಿ ಅಥವಾ ಕ್ಯಾಂಪಸಿನ ಹೊರಗಿರುವ ಬಿ.ಜೆ.ಪಿ ಮತ್ತು ಆರ್.ಎಸ್.ಎಸ್‌ನಂಥ ವಿಭಜನೆಯ ಶಕ್ತಿಗಳ ವಿರುದ್ಧ ನಾವು ಸಂಘಟಿತರಾಗಿ ನಿಲ್ಲುವೆವು. ಆ ಶಕ್ತಿಗಳು ದೇಶವನ್ನು ಹಾಳಮಾಡಲು ಪ್ರಯತ್ನಿಸುತ್ತಿವೆ. ಜೆ.ಎನ್.ಯು ಅವರ ವಿರುದ್ಧ ಸಂಘಟಿತರಾಗಿ ನಿಲ್ಲವುದು. ಇತಿಹಾಸವು ಇದಕ್ಕೆ ಸಾಕ್ಷಿಯಾಗುವುದು.

ರೋಹಿತ್ ವೇಮುಲ ಮಾಡಿದ ಹೋರಾಟ ಮತ್ತು ನಿಮ್ಮಂಥ ಅನೇಕ ಶಾಂತಿಪ್ರಿಯ ಮತ್ತು ಪ್ರಗತಿಪರ ಜನರು ಸೇರಿ ಹೂಡಿದ ಈ ಹೋರಾಟ ಗೆಲ್ಲುವುದು. ಈ ಹೋರಾಟದಲ್ಲಿ ಭಾಗವಹಿಸಿದ ಪ್ರತಿಯೊಬ್ಬರಿಗೂ ವಂದನೆ. ನಾವೆಲ್ಲಾ ಸೇರಿ ಜೊತೆ ಜೊತೆ ನಡೆಯೋಣ ಇಲ್ಲಿಗೆ ಮುಗಿಸುತ್ತೇನೆ.

ಕ್ರಾಂತಿಗೆ ಜಯವಾಗಲಿ; ರಾಷ್ಟ್ರೈಕ್ಯತೆಗೆ ಜಯವಾಗಲಿ; ಸಾಮಾಜಿಕ ನ್ಯಾಯಕ್ಕೆ ಜಯವಾಗಲಿ.

ಮೂಲ ಹಿಂದಿಯಿಂದ ಇಂಗ್ಲೀಷ್; ಇಂಗ್ಲೀಷ್‌ಯಿಂದ ಕನ್ನಡಕ್ಕೆ ಅನು ಸು.ಕೌ.

ವ್ಯಕ್ತಿ ವಿಶೇಷ

ಹಳೆ ಮತ್ತು ಹೊಸ ಕಾಲದ ವಿಚಾರಗಳ ಸಮನ್ವಯಕಾರ ಬನ್ನಂಜೆ ಗೋವಿಂದಾಚಾರ್ಯ

ಲೇ – ಅಕ್ಷರ ಕೆ. ವಿ.

ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯ ಅವರಿಗೆ ಎರಡು ದಿಕ್ಕಿನ ವಿಶಾಲ ಅಭಿಮಾನಿ ವರ್ಗವಿದೆ – ಒಂದು, ಅವರ ಘನ ಪಾಂಡಿತ್ಯದ ಪ್ರಯೋಜನ ಪಡೆದು ಅವರ ವಿದ್ವತ್ತಿನಿಂದ ಪ್ರಭಾವಿತರಾದವರ ಗೊಂಪು; ಇನ್ನೊಂದು ಅವರ ಆಕರ್ಷಕ ಪ್ರವಚನಗಳನ್ನು ಕೇಳಿ ರೋಮಾಂಚಿತರಾದ ಆಸಕ್ತರ ಬಳಗ. ಸಂಸ್ಕೃತ ಭಾಷೆ, ಸಾಹಿತ್ಯ, ಸಂಸ್ಕೃತಿ, ದರ್ಶನ – ಮೊದಲಾದ ವಿಚಾರಗಳ ಬಗ್ಗೆ ಅವರು ಬರೆದ ಪುಸ್ತಕಗಳ ವಿಷಯ ಮತ್ತು ವಿನ್ಯಾಸಗಳ ಹರಹು ತುಂಬ ದೊಡ್ಡದು. ಮಾಧ್ವ ದರ್ಶನದ ಸಮಕಾಲೀನ ವ್ಯಾಖ್ಯಾನಕಾರರೊ ಎಂಬಂತೆ ಕೆಲಸ ಮಾಡಿರುವ ಅವರು ಆನಂದ ಮಾಲ, ವಾಯುಸ್ತುತಿ, ವಿಷ್ಣುಸ್ತುತಿ ಮತ್ತು ಮಧ್ವಚಾರ್ಯರ ಅನೇಕ ಬರಹಗಳಿಗೆ ಸಂಸ್ಕೃತ ಭಾಷೆಯಲ್ಲೆ ಟಿಪ್ಪಣಿ ಬರೆದಿದ್ದಾರೆ! ಮಾಧ್ವ ರಾಮಾಯಣ, ಮಂಗಲಾಷ್ಟಕ ಇತ್ಯಾದಿ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅಲ್ಲದೆ, ಪುರುಷಸೂಕ್ತ – ಶ್ರೀ ಸೂಕ್ತಗಳಿಂದ ಆರಂಭಿಸಿ ಉಪನಿಷತ್ತು, ಗೀತೆಗಳನ್ನೊಳಗೊಂಡು ಭಾರತದ ಮಹತ್ವದ ದಾರ್ಶನಿಕ ಪಠ್ಯಗಳ ಕುರಿತು ಅವರು ವಿಭಿನ್ನ ಬರಹಗಳನ್ನು ಪ್ರಕಟಿಸಿದ್ದಾರೆ. ಇನ್ನು, ಶಾಸ್ತ್ರೀಯ ಸಂಸ್ಕೃತ ಸಾಹಿತ್ಯದ ಮೇರು ಕೃತಿಗಳನ್ನು ಅವರು ಕನ್ನಡೀಕರಿಸಿರುವ ರೀತಿಯೂ ತುಂಬ ವಿಶಿಷ್ಟವಾದದ್ದು. ಬಹುತೇಕ ಸಂಸ್ಕೃತ ಅನುವಾದಗಳಲ್ಲಿ ಮಾಡುವಂತೆ ಅವರು ಸಂಸ್ಕೃತದ ನುಡಿಗಟ್ಟುಗಳನ್ನು ಹಾಗೇ ಉಳಿಸಿಕೊಳ್ಳುವಬದಲು, ಅದರ ಅರ್ಥವರ್ಧನೆಯಾಗುವಂತೆ ಕನ್ನಡದಲ್ಲಿ ಮರುರೂಪಣೆ ಮಾಡಿದ್ದಾರೆ – 'ಅಭಿಜ್ಞಾನ ಶಾಕುಂತಲಂ' ಅವರ ಅನುವಾದದಲ್ಲಿ 'ನೆನಪಾದಳು ಶಕುಂತಲೆ' ಯಾಗುತ್ತದೆ! 'ಉತ್ತರ ರಾಮಚರಿತೆ' ಎನ್ನು ಅವರು 'ಮತ್ತೆ ರಾಮನ ಕಥೆ' ಎಂದು ಮರುನಾಮಕರಣ ಮಾಡುತ್ತಾರೆ! 'ಮೃಚ್ಛಕಟಿಕಮ್' ನಾಟಕವು 'ಅವೆ ಮಣ್ಣಿನ ಆಟದ ಬಂಡಿ' ಎಂಬ ಅಪರೂಪದ ಹೆಸರು ಪಡೆಯುತ್ತದೆ. ಇಷ್ಟೆಲ್ಲ ಪಾಂಡಿತ್ಯ ಪೂರ್ಣ ಪ್ರಕಟಣೆಗಳನ್ನು ಅವರು ಮಾಡಿದ್ದರೂ ಮೂಲತಃ ಅವರು ಕನ್ನಡದ ಜನಮಾನಸದಲ್ಲಿ ಪ್ರಚಲಿತರಾಗಿರುವುದು. ಪ್ರವಚನಕಾರರಾಗಿ ಕಳೆದ ಹಲವು ದಶಕಗಳಲ್ಲಿ, ಕನಾಟಕದ ರಾಜಧಾನಿಯಿಂದ ದೂರದೂರದ ಕುಗ್ರಾಮಗಳವರೆಗೂ, ನೂರಾರು ಊರುಗಳಲ್ಲಿ ಇವರ ಪ್ರವಚನದ ಸರಣಿಗಳು ನಡೆದಿವೆ! ಜನಪ್ರಿಯ ಆರ್ಕೆಸ್ಟ್ರಾಗಳಿಗೆ ಜನಸೇರುವ ಹಾಗೆ ಇವರ ಉಪನ್ಯಾಸಗಳಿಗೆ ವಿಶಾಲ ಪ್ರೇಕ್ಷಕವರ್ಗ ಒದಗಿಬರುತ್ತದೆ. ಆ ಉಪನ್ಯಾಸಗಳಲ್ಲಿ ಇವರು ಧರ್ಮ – ದರ್ಶನ – ಸಾಹಿತ್ಯ ಎಂಬಿತ್ಯಾದಿ ವಿಭಜನೆಗಳನ್ನೆಲ್ಲ

ಉಲ್ಲಂಘಿಸಿ, ಭಾರತದ ನಾನಾಬಗೆಯ ಪಥ್ಯ – ಪರಂಪರೆ – ತತ್ವ – ಆಚರಣೆಗಳನ್ನೆಲ್ಲವನ್ನು ಸೇರಿಸಿಕೊಂಡು ವಿಶಾಲ ಕಥನವೊಂದನ್ನು ಕಟ್ಟುತ್ತಾರೆ! ಮತ್ತು ಆ ಮೂಲಕ ಭಾರತೀಯ ಸಂಪ್ರದಾಯಗಳನ್ನು ಆಧುನಿಕಕಾಲದಲ್ಲಿ ಪುನರಾವಿಷ್ಕಾರ ಮಾಡಿಕೊಳ್ಳುವ ಒಂದು ಹೊಸಮಾರ್ಗಕ್ಕೆ ಪ್ರವರ್ತಕರಾಗಿದ್ದಾರೆ.

೨೩–೨೭ ಡಿಸೆಂಬರ್ ೨೦೧೫ದರಲ್ಲಿ, ಅವರಿಗೆ ೮೦ವರ್ಷ ತುಂಬುತ್ತಿರುವ ಸಮಯದಲ್ಲಿ, ಅವರ ಅಭಿಮಾನಿಗಳು ಬೆಂಗಳೂರಿನಲ್ಲಿ ಅವರನ್ನು ಸನ್ಮಾನಿಸುತ್ತಿದ್ದಾರೆ. ಆ ಸಂದರ್ಭಕ್ಕೆ ಪೂರ್ವಭಾವಿಯಾಗಿ, ನಾನು ಕಿರು ಸಂಭಾಷಣೆಯೊಂದನ್ನು ನಡೆಸಲು ಬಯಸಿ ಅವರನ್ನು ಸಂಪರ್ಕಿಸಿದೆ. 'ನಿಮ್ಮ ಚಿಂತನೆಗಳ ವ್ಯಾಪ್ತಿ – ವಿಸ್ತಾರಗಳ ಹರಹು ತುಂಬ ದೊಡ್ಡದ್ದು; ಅದರಲ್ಲಿ ಯಾವ ದಿಕ್ಕನ್ನು ಕುರಿತು ನಿಮ್ಮೊಂದಿಗೆ ಮಾತಾಡಲೆಂದು ನನಗೆ ತಿಳಿಯುತ್ತಿಲ್ಲ' ಎಂದು ನಾನು ಮಾತು ಆರಂಭಿಸಿದಾಗ ಅವರು ಹೇಳಿದರು – 'ನನಗೆ ವರ್ತಮಾನದ ಎಲ್ಲ ಬಗೆಯ ಸಮಸ್ಯೆಗಳ ಬಗ್ಗೆ ಕುತೂಹಲವಿದೆ, ಭೂತಕಾಲವನ್ನು ಕುರಿತು ಆಸಕ್ತಿಯಿದೆ ಮತ್ತು ಭವಿಷ್ಯದ ಬಗ್ಗೆ ಕಾಳಜಿ ಇದೆ. ಹಾಗಾಗಿ ಯಾವ ವಿಚಾರವೂ ಆದೀತು!' ಪ್ರಸ್ತುತ ಕಿರು ಸಂದರ್ಶನದ ಮಿತಿಯಲ್ಲಿ ನಾನು ವರ್ತಮಾನವನ್ನು ಕುರಿತು ಮಾತ್ರ ನಿಮ್ಮೊಂದಿಗೆ ಮಾತನಾಡುತ್ತೇನೆ – ಎಂಬ ಪೀಟಿಕೆಯೊಮದಿಗೆ ನಾನು ಈ ಸಂಭಾಷಣೆಯನ್ನು ನಡೆಸಿದೆ. ಆ ಕಿರುಸಂಭಾಷಣೆಯ ತುಣುಕುಗಳನ್ನು ನಾನು ಕೇಳಿಸಿಕೊಂಡು ನೆನಪಿನಲ್ಲಿ, ನನ್ನದೇ ರೀತಿಯಿಂದ ತುಸು ಅತ್ತಿತ್ತ ಜೋಡಿಸಿ ಈ ಮರುರೂಪಣೆಯನ್ನು ಹೆಣೆದಿದ್ದೇನೆ.

ಇವತ್ತಿನ ಕಾಲದೇಶದಲ್ಲಿ ಸಂಸ್ಕೃತ ಮತ್ತು ಭಾರತದ ಸಂಸ್ಕೃತಿಗಳ ಸ್ಥಿತಿ ಗತಿ ಹೇಗಿದೆಯಂದು ನಿಮಗನ್ನಿಸುತ್ತಿದೆ ?

ನಾವಿವತ್ತು ವಿಚಿತ್ತರವಾದ ಒಂದು ಸಂದರ್ಭದಲ್ಲಿದ್ದೇವೆ. ಒಂದುಕಡೆಯಿಮದ ನಮ್ಮ ಗತಕಾಲ ನಮಗೆ ಸಮಸ್ಯಾತ್ಮಕವಾಗಿ ಕಾಣುತ್ತಿದೆ; ಹಲವು ಅನಿಷ್ಟಗಳ ಸಂಗಮವಾಗಿಯೂ ಕಾಣುವುದಿದೆ. ಆದರೆ, ಅದಕ್ಕಿಂತ ತೀರ್ವವಾಗಿ, ಆ ಗತಕಾಲದ ದಾರ್ಶನಿಕತೆಯ ತಿರುಳು ನಮಗೆ ರೋಚಕವಾಗಿ ಕೂಡ ಕಾಣುತ್ತಿದೆ. ಈ ಮಾತನ್ನು ನಾನು, ಭಾರತದ ಮತ್ತು ಹೊರದೇಶಗಳ – ಮುಖ್ಯವಾಗಿ ಗಲ್ಫ್ ದೇಶಗಳು ಮತ್ತು ಅಮೇರಿಕಾದ – ನೂರಾರು ಊರುಗಳಲ್ಲಿ ಮಾಡಿದ ಅಸಂಖ್ಯಾತ ಉಪನ್ಯಾಸಗಳ ಅನುಭವದಿಂದ ಹೇಳುತ್ತಿದ್ದೇನೆ; ಆ ಮೂಲಕ ಸಂಪರ್ಕ ಪಡೆದ ಬಹು ಸಂಖ್ಯೆಯ ಜನಗಳ ಪ್ರತಿಸ್ಪಂದನೆಯ ಆಧಾರದ ಮೇಲೆ ಹೇಳುತ್ತಿದ್ದೇನೆ. ಇವತ್ತಿನ ಯುವಜನರು, ಭಾರತದ ಧರ್ಮ – ಸಂಸ್ಕೃತಿ ಮತ್ತು ದಾರ್ಶನಿಕತೆಗಳ ಪರಿಚಯಕ್ಕಾಗಿ ಹಾತೊರೆಯುತ್ತಿದ್ದಾರೆ. ನಾನು ಯಾವುದೇ ಊರಿಗೆ ಉಪನ್ಯಾಸಕ್ಕೆ ಹೋದರೂ ಜನ – ಅದರಲ್ಲೂ ಯುವಜನ –ನನ್ನ ಮಾತುಗಳನ್ನು ತುಂಬ ತತ್ಪರರಾಗಿ ಕೇಳುತ್ತಾರೆ; ಪ್ರಶ್ನೆಗಳನ್ನು ಎತ್ತುತ್ತಾರೆ; ಮತ್ತೆ ಮಾತನಾಡಬೇಕೆಂದು ಒತ್ತಾಯಿಸುತ್ತಾರೆ. ಭಾರತದ ಗತಕಾಲದ ಬಗ್ಗೆ ಹಳೆಕಾಲದ ಮಾತುಗಳನ್ನೇ ಕೇಳುತ್ತ ಪೂರ್ವಾಗ್ರಹಗಳನ್ನು

ಬೆಳೆಸಿಕೊಂಡು ನಾಸ್ತಿಕರಾಗಿದ್ದ ಬೆಂಗಳೂರಿನ ನೂರಾರು ಯುವಕರು ನನ್ನ ಸಂಪರ್ಕಕ್ಕೆ ಬಂದ ಬಳಿಕ ಭಾರತದ ದಾರ್ಶನಿಕ ಧಾರೆಗಳಲ್ಲಿ ವಿಶೇಷ ಕುತೂಹಲ ತೋರಿಸತೊಡಗಿದ್ದಾರೆ. ವಿದೇಶಗಳಲ್ಲಂತು 'ನೀವು ಇಲ್ಲಿಯೇ ಒಂದಾದಮೇಲೊಂದು ಭಾಷಣಾ ಮಾಡುತ್ತಾ ಇದ್ದು ಬಿಡಿ; ನಿಮ್ಮ ಇರವಿನ ವ್ಯವಸ್ಥೆ ನಾವು ಮಾಡುತ್ತೇವೆ' ಎಂದು ನನ್ನನ್ನು ಒತ್ತಾಯಿಸಿದ್ದೂ ಇದೆ! ಆದರೆ, ಅವರಿಗೆ ಅರ್ಥವಾಗುವಂತೆ ಮತ್ತು ಇಷ್ಟವಾಗುವಂತೆ ಭಾರತೀಯ ವಿಚಾರಗಳನ್ನು ನವೀಕರಿಸಿ ಕೊಡಬೇಕಾದ ಜವಾಬ್ಧಾರಿ ನನ್ನಂತವರ ಮೇಲಿದೆ.

ಆ ನವೀಕರಣ ಯಾವ ಬಗೆಯದ್ದು ?

ಮೊತ್ತ ಮೊದಲನೆಯದಾಗಿ ನಾವು ಗತಕಾಲದಲ್ಲಿ ಇದ್ದಿದ್ದೆಲ್ಲವೂ ಶ್ರೇಷ್ಠವೆಂಬ ಭಾವನೆಯನ್ನು ಬಿಡಬೇಕು; ಜತೆಗೇ, ಆಧುನಿಕತೆಯಲ್ಲಿ ಇರುವುದೆಲ್ಲವೋ ಶ್ರೇಷ್ಠವಲ್ಲ ಎಂಬುವುದನ್ನು ಅರಿತುಕೊಳ್ಳಬೇಕು. ಎರಡನೆಯದಾಗಿ, ಮೌಢ್ಯ-ಮತದಿಂದ ಮುಕ್ತವಾಗಿರುವ, ಎಲ್ಲ ಕಾಲದೇಶಗಳಿಗೂ ಅನ್ವಯವಾಗಬಲ್ಲ ವಿಚಾರಗಳನ್ನು ನಾವೀಗ ಭಾರತದ ಸಾಂಪ್ರದಾಯದೊಳಗಿಂದ ಕಂಡುಕೊಳ್ಳಬೇಕಾಗಿದೆ. ಅದಕ್ಕಾಗಿ ನಾವು ಸಾಂಪ್ರದಾಯಿಕರು ಆಗದೆ, ಇತ್ತ ಆಧುನಿಕರು ಆಗದೆ ಇರುವ ಹೊಸತನವೊಂದನ್ನು ರೂಢಿಸಿಕೊಳ್ಳಬೇಕು. ಅಂಥ ಹೊಸತನವನ್ನು ನಾನು ಹುಡುಕುತ್ತಿರುವುದರಿಂದಲೇ ಹಲವರಿಗೆ 'ಅತ್ತಲು ಇಲ್ಲ, ಇತ್ತಲು ಇಲ್ಲ' ಎಂಬಂತೆ ಕಂಡು ಸಾಂಪ್ರದಾಯಿಕರಿಂದ ಸಂಪ್ರದಾಯ ವಿರೋಧಿ ಎಂತಲೂ ಆಧುನಿಕರಿಂದ ಸಾಂಪ್ರದಾಯಿಕನೆಂತಲೂ ಎರಡೂ ಪಂಗಡದವರಿಂದ ಬೈಗುಳ ಪಡೆದಿದ್ದೇನೆ. ಅದೇನೇ ಇದ್ದರೂ ಹೊಸತನವನ್ನು ಸ್ವೀಕರಿಸಿ, ಜೊತೆಗೆ, ಹಳತರಲ್ಲಿ ಇರುವ ಒಳ್ಳೆಯದನ್ನು ಉಳಿಸಿಕೊಳ್ಳಬೇಕು ಎನ್ನುವುದು ನನ್ನ ನಿಲುವು. ನಮ್ಮ ಕಾಲದ ಬಹು ಸಂಖ್ಯೆಯ ಯುವಜನರಿಗೆ ಕೂಡ ಇಂಥದೊಂದು ಹೊಸತನ ಖಂಡಿತವಾಗಿಯೂ ಬೇಕಾಗಿದೆ. ಗತಕಾಲವನ್ನು ಅದರ ಮೌಢ್ಯಗಳಿಂದಲೂ ಮಡಿವಂತಿಕೆಯ ಪ್ರಭಾವಗಳಿಂದಲೂ ಮುಕ್ತಗೊಳಿಸಿ, ಅದರ ದಾರ್ಶನಿಕ ತಿರುಳನ್ನು ಪಡೆದುಕೊಳ್ಳಲು ಅವರು ಉತ್ಸುಕರಾಗಿದ್ದಾರೆ. ಮತ ಮತ್ತು ಜಾತಿಯ ವ್ಯಾಪ್ತಿಯೊಳಗೇ ನಿಂತುಕೊಂಡು ಮಾತಾಡುವ ಜನ ಅವರಿಗೆ ಬೇಕಾಗಿಲ್ಲ; ಆ ಆವರಣದಿಂದ ಹೊರಗೆ ಬಂದು ಭಾರತೀಯತೆಯನ್ನು ಕುರುತಿ ಮಾತಾಡಿದರೆ ಅವರು ಅದನ್ನು ಇಷ್ಟಪಟ್ಟು ಸ್ವೀಕರಿಸುತ್ತಾರೆ. ಅಂಥ ಒಂದು ಜನಮಾನಸವನ್ನು ನಾವಿವತ್ತು ಅರ್ಥ ಮಾಡಿಕೊಂಡು ಭಾರತೀಯ ಸಂಸ್ಕೃತಿ ಮತ್ತು ದಾರ್ಶನಿಕತೆಗಳನ್ನು ನವೀಕರಿಸಬೇಕು. ಅದನ್ನು ಮತ ಮೌಢ್ಯ-ಮಡಿಗಳಿಂದೆತ್ತಿ ಶುದ್ಧಗೊಳಿಸಬೇಕು. ಹಾಗೆ ನವೀಕರಿಸಿದರೆ ಈ ಪರಂಪರೆಗೆ ಭವಿಷ್ಯವಿದೆ; ಇಲ್ಲವಾದರೆ ಇಲ್ಲ. ಅದನ್ನು ಅರ್ಥಮಾಡಿಕೊಂಡು ಕೆಲಸ ಮಾಡುತ್ತಿರುವುದರಿಂದಲೇ ನನ್ನ ಉಪನ್ಯಾಸಗಳು ಯಶಸ್ವಿಯಾಗುತ್ತಿವೆ ಎಂದು ನಾನು ತಿಳಿದಿದ್ದೇನೆ.

ಇವತ್ತು ಭಾರತದ ಸಾಂಪ್ರದಾಯಿಕ ದರ್ಶನ – ಕಲೆಗಳನ್ನು ಕುರಿತ ಅಧ್ಯಯನದ

ಆಸಕ್ತಿ ವಿದೇಶಗಳಲ್ಲೇ ಹೆಚ್ಚಾಗುತ್ತಿದೆಯಲ್ಲ ? ಭಾರತದ ಶೈಕ್ಷಣಿಕ ಕೇಂದ್ರಗಳಲ್ಲಿ ಅದಕ್ಕೆ ವಿರುದ್ಧವಾಗಿ ಫಿಲಾಸಫಿ ಮತ್ತು ಸಂಸ್ಕೃತ ವಿಭಾಗಗಳೇ ಮುಚ್ಚುತ್ತಿವೆಯಲ್ಲ ? ಇಂಥ ಬೆಳವಣಿಗೆ ನಡೆಯುತ್ತಿರುವು ನಮ್ಮದೇಶದಲ್ಲಿ ಮಾತ್ರ. ಅದಕ್ಕೂ ಕಾರಣರು ನಾವೆ. ಸಂಸ್ಕೃತ ಭಾಷೆ ಮತ್ತು ಆ ಭಾಷೆಯ ಪಠ್ಯಗಳೆಲ್ಲವೂ ಬ್ರಾಹ್ಮಣ ಜಾತಿಗೆ ಸಂಬಂಧ ಪಟ್ಟಿದ್ದೆಂದೂ ಮತ್ತು ಅದು ಜಾತಿ ವ್ಯವಸ್ಥೆಯನ್ನು ಪೋಷಿಸುವ ಮಾಧ್ಯಮವೆಂತಲೂ ನಾವು ಇದುವರೆಗು ಚಿತ್ರಿಸುತ್ತಾ ಬಂದಿದ್ದೇವೆ. ವಾಸ್ತವಿಕವಾಗಿ ಇದು ಸುಳ್ಳು, ಯಾವುದೇ ಭಾಷೆಗೂ ಜಾತಿಯಿಲ್ಲ. ಆದರೆ ಇಂಥ ಪರಿಕಲ್ಪನೆಯೊಂದು ಹುಟ್ಟಿ ಬೆಳೆದಿರುವುದಕ್ಕೆ ಸಂಸ್ಕೃತದ ವಿರೋಧಿಗಳೆಷ್ಟು ಕಾರಣರೋ ಅದರ ಪರವಾಗಿರುವವರೂ ಅಷ್ಟೇ ಜವಬ್ಧಾರರೆಂದು ನಾನು ಭಾವಿಸುತ್ತೇನೆ. ಆದ್ದರಿಂದಲೇ, ಇವತ್ತು ಭಾರತದೊಳಗೆ ಸಂಸ್ಕೃತಭಾಷಗೆ ಏನನ್ನು ಮಾತನಾಡಿದರು ಅದು ಪರೋಕ್ಷವಾಗಿ ಬ್ರಾಹ್ಮಣ ಮತ್ತು ಜಾತೀಯತೆಯ ಪರವಾದ ವಕಾಲತ್ತು ಎಂದು ಕಾಣುವ ಸನ್ನಿವೇಷ ನಿರ್ಮಾಣವಾಗಿದೆ. ಜೊತೆಗೆ ಇನ್ನೊಂದು ತೊಡಕು ಇದೆ; ಭಾರತದಲ್ಲಿ ನೀವು ಮಾಧ್ವಸಿದ್ಧಾಂತದ ಉಲ್ಲೇಖ ಮಾಡುತ್ತಿದ್ದಂತೆ, ಅದ್ವೈತಿಗಳಿಗೆ ಅದು ಅಪಥ್ಯವಾಗಿ ಕಾಣುತ್ತದೆ; ಭಾರತದ ಬೇರೆಬೇರೆ ದರ್ಶನ ಪರಂಪರೆಗಳೆಲ್ಲವೂ ಒಂದಕ್ಕೊಂದು ವಿರೋಧಿ ಎಂಬಂತೆ ಗ್ರಹಿಸುವ ವಾತಾವರಣ ನಮ್ಮಲ್ಲಿ ನಿರ್ಮಾಣವಾಗಿದೆ. ಪಶ್ಚಿಮ ದೇಶಗಳಲ್ಲಿ ಸಹಜವಾಗಿಯೇ ಸಂಸ್ಕೃತದ ಬಗ್ಗೆ ಅಂಥ ಪೂರ್ವಾಗ್ರಹದ ಭಾರಗಳಿಲ್ಲ; ನಮ್ಮ ದರ್ಶನಗಳನ್ನು ವಿರೋಧಿ ನೆಲೆಯಲ್ಲಿ ಕಾಣಬೇಕಾದ ಒತ್ತಡ ಅವರಿಗಿಲ್ಲ. ಹಾಗಾಗಿ, ಅಲ್ಲಿನ ವಿದ್ವಾಂಸರು, ಆಸಕ್ತರು ಮತ್ತು ವಿದ್ಯಾರ್ಥಿಗಳು ನನ್ನಂಥವರ ಮಾತುಗಳನ್ನು ತುಂಬ ಮುಕ್ತ ಮನಸ್ಸಿನಿಂದ ಆಲಿಸುತ್ತಾರೆ. ಅದರಲ್ಲಿ ತಮ್ಮ ಕಾಲಕ್ಕೆ ಉಪಯುಕ್ತವಾದ ಸಂಗತಿಗಳು ಇರಬಹುದೇ ಎಂದು ಹುಡುಕಿಕೊಳ್ಳುತ್ತಾರೆ. ಆದ್ದರಿಂದ ಇವತ್ತು ಭಾರತಕ್ಕಿಂತ ಪಶ್ಚಿಮದಲ್ಲೇ ಸಂಸ್ಕೃತವನ್ನು ಕುರಿತ ಉಪಯುಕ್ತ ಅಭ್ಯಾಸ ನಡೆಸಬಲ್ಲ ವಾತಾವರಣವಿದೆ. ಉದಾಹರಣೆಗೆ, ರಷ್ಯಾದಲ್ಲಿ ಈಚೆಗೆ ಭಾರತೀಯ ತಾತ್ವಿಕತೆಯನ್ನು ಕುರಿತ ಒಂದು ಅಧ್ಯಯನ ಕೇಂದ್ರ ಆರಂಭವಾಗಿದ್ದು ಅದಕ್ಕವರು ನನ್ನನ್ನು ಮಾರ್ಗದರ್ಶಿಯೆಂದು ಸೇರಿಸಿಕೊಂಡಿದ್ದಾರೆ; ಅವರೀಗ ಉಡುಪಿಗೆ ಬಂದು ನನ್ನಿಂದ ಪಾಠ ಹೇಳಿಸಿಕೊಳ್ಳುತ್ತಿದ್ದಾರೆ. ಅಮೇರಿಕಾದಲ್ಲೂ ಇಂಥದ್ದೊಂದು ಹೊಸ ಸಂಸ್ಥೆಯನ್ನು ಪ್ರಾರಂಭಿಸುವ ಪ್ರಸ್ತಾಪವಿದ್ದು, ಮುಂದಿನ ಏಪ್ರಿಲ್ – ಮೇ ತಿಂಗಳುಗಳಲ್ಲಿ ನಾನು ಅಲ್ಲಿಗೆ ಮಾತಾಡಲಿಕ್ಕೆ ಹೋಗಲಿದ್ದೇನೆ. ಮೊನ್ನೆ ಯಾರೋ ಕೇಳಿದಾಗ, ನಾನು ತಮಾಷೆಗೆ ಹೇಳಿದೆ -- ನೋಡಿ, ಮುಂದಿನ ಕೆಲವು ವರ್ಷಗಳಲ್ಲಿ ಭಾರತಕ್ಕಿಂತಲೂ ಅಮೇರಿಕಾವೇ ಹೆಚ್ಚು ವೈದಿಕ ದೇಶವಾಗುತ್ತದೆ; ಭಾರತ ಲೌಕಿಕದ ಕಡೆಗೆ ಸಾಗುತ್ತದೆ. – ಅಂತ!

ನೀವು ನವೀಕರಿಸಿ ನಿರೂಪಿಸುತ್ತಿರುವ ಆ ಭಾರತೀಯತೆಯ ಪ್ರಮುಖ ಚಹರೆಗಳೇನು ? ಅದನ್ನು ನಾವು ಗತಕಾಲದ ಯಾವಬಗೆಯ ಆಕರಗಳಿಂದ

ಗ್ರಹಿಸಿಕೊಳ್ಳಬಹುದೆಂದು ನಿಮಗನ್ನಿಸುತ್ತದೆ?

ಆ ಕೆಲಸ ಮಾಡಲಿಕ್ಕೆ ಹಲವು ಮಾರ್ಗಗಳಿದ್ದಾವೆ. ಒಂದು ಉದಾಹರಣೆಗೆ ಹೇಳುವುದಾರೆ, ಭಗವದ್ಗೀತೆಯು ನನ್ನ ಪ್ರಕಾರ ಭಾರತೀಯ ಚಿಂತನೆಗಳನ್ನು ಅರಿತು ಪುನರಾವಿಷ್ಕರಿಸಿಕೊಳ್ಳಲು ಸಹಾಯ ಮಾಡಬಲ್ಲ ಒಂದು ಪ್ರಮುಖ ಆಕರ ಪಠ್ಯ ಭಗವದ್ಗೀತೆಯನ್ನು ಧರ್ಮಗ್ರಂಥವೆಂದೊ ಅಥವ ದಾರ್ಶನಿಕ ಉಪದೇಶದ ಪಠ್ಯವೆಂದೊ ಇಲ್ಲಿಯವರೆಗೆ ನಾವು ವ್ಯಾಖ್ಯಾನಮಾಡುತ್ತ ಬಂದಿದ್ದೇವೆ. ಅದರ ಬದಲು, ಅದನ್ನು ಮನಶಾಸ್ತ್ರೀಯ ನೆಲೆಯಿಂದ ವಿಶ್ಲೇಷಣೆ ಮಾಡಿದರೆ, ತುಂಬ ಹೊಸಬಗೆಯ ಓದುಗಳು ಹುಟ್ಟುವುದಕ್ಕೆ ಸಾಧ್ಯವಿದೆ. ಆದರೆ ನಮ್ಮ ಹಳೆಕಾಲದ ಪಂಡಿತರಿಗೆ ಮನಶಾಸ್ತ್ರದ ಪರಿಚಯವೇ ಇಲ್ಲದ್ದರಿಂದ ಅಂತ ಓದು ಆಗಿಯೇ ಇಲ್ಲ. ಸಧ್ಯ, ನಾನು ಅಂತದ್ದೊಂದು ಪುಸ್ತಕಮಾಲೆಯನ್ನು ರಚಿಸಲು ಆರಂಭಿಸಿದ್ದೇನೆ. ಆ ಮಾಲೆಯಲ್ಲಿ ಭಗವದ್ಗೀತೆಯ ಪ್ರತಿಯೊಂದು ಅಧ್ಯಾಯವನ್ನು ಕೇಂದ್ರೀಕರಿಸಿ ನಾನು ಮುನ್ನೂರು – ನಾನೂರು ಪುಟಗಳ ಒಂದೊಂದು ಸಂಪುಟ ಬರೆಯುತ್ತಿದ್ದೇನೆ; ಅದರ ಮೊದಲ ಕೆಲವು ಸಂಪುಟಗಳು ಬಂದಿವೆ. ಗೀತೆಯನ್ನು ನಾವು ಹೇಗೆ ಈ ಹೊಸ ನೆಲೆಯಿಂದ ಗ್ರಹಿಸಬಹುದು ಎಂಬುವುದನ್ನು ಕುರಿತು ವಿವರವಾಗಿ ಚರ್ಚಿಸುವುದೇ ಆ ಪುಸ್ತಕಗಳ ಆಶಯ.

ಹಾಗಿದ್ದರೆ, ನೀವು ಇವತ್ತಿನ ಸಾಂಸ್ಕೃತಿಕ ಬಿಕ್ಕಟ್ಟುಗಳ ಕಾಲದಲ್ಲಿಯೂ ಆಶಾವಾದಿಯಾಗಿಯೇ ಇದ್ದೀರಿ ಎನ್ನಬಹುದೆ ?

ಯಾವ ಅನುಮಾನವೂ ಇಲ್ಲ. ನಾನು ಪೂರ್ಣ ಆಶಾವಾದಿಯಾಗಿಯೇ ಇದ್ದೇನೆ. ನಮ್ಮ ಗತಕಾಲ, ಸಂಸ್ಕೃತಿ, ಸಂಸ್ಕೃತ ಭಾಷೆ – ಸಾಹಿತ್ಯಗಳನ್ನು ಕುರಿತು ಮತ್ತೆಮತ್ತೆ ಹೇಳಿದ್ದನ್ನೆ ಹೇಳುವ ಮತ್ತು ಪೂರ್ವಾಗ್ರಹಗಳಿಂದ ಹೊರಬರಲಿಕ್ಕಾಗದೆ ಇರುವ ಹಳೆಗಾಲದ ಜನರನ್ನು ನಾವೀಗ ಅವರಪಾಡಿಗೆ ಬಿಟ್ಟುಬಿಡಬೇಕು. ಅವರಜೊತೆಗೆ ಖಂಡನೆಯೂ ಬೇಡ, ಮಂಡನೆಯೂ ಬೇಡ. ಬದಲು, ನಮ್ಮ ಗಮನವನ್ನು ಹೊಸಕಾಲದ ಯುವಜನರ ಆಸಕ್ತಿಗಳ ಮೇಲೆ ಕೇಂದ್ರೀಕರಿಸಬೇಕು. ಭಾರತೀಯ ಚಿಂತನಕ್ರಮಗಳ ಬಗ್ಗೆ ಅವರಲ್ಲಿ ಮೂಡುತ್ತಿರುವ ಆಸಕ್ತಿ ಮತ್ತು ಆಸ್ವಾದಗಳನ್ನು ಬೆಳೆಸುವುದು ಹೇಗೆ ಎಂಬುದನ್ನು ನಾವು ಯೋಚಿಸುತ್ತಾ ಮುನ್ನಡೆದರೆ ಮುಂದಿನದಾರಿ ತಾನಾಗಿಯೇ ತೆರೆದುಕೊಳ್ಳುತ್ತದೆ – ಇದು ನನ್ನ ನಂಬಿಕೆ. ಮಠ ಮತ್ತು ಮಡಿ – ಈ ಎರಡನ್ನು ಬಿಟ್ಟರೂ ಸಾಕು, ನನ್ನ ಮಾತುಗಳಿಗೆ ಲಕ್ಷಾಂತರ ಹೊಸಗಾಲದ ಕೇಳುಗರು ಸಿದ್ದವಾಗುತ್ತಾರೆ. ಅಂಥವರ ಒಂದು ವಿಶಾಲ ಬಳಗವನ್ನೆ ನಾನು ನನ್ನ ಉಪನ್ಯಾಸಗಳ ಮೂಲಕ ಖಂಡಿದ್ದೇನೆಂದು ನನಗನಿಸಿದೆ.

ಸಾಭಾರ ನೀನಾಸಮ್ ಮಾತುಕತೆ

ಮೋಹನ್ ಮತ್ತು ಮಹಾದೇವ

– ನಾರಾಯಣ ದೇಸಾಯಿ

ಮಹಾತ್ಮ ಗಾಂಧೀಜಿಯವರ ಆಪ್ತ ಕಾರ್ಯದರ್ಶಿಯಾಗಿ ಇಪ್ಪತ್ತು ವರ್ಷ ಕೆಲಸ ಮಾಡಿದ ಮಹಾದೇವ ದೇಸಾಯಿ ಅವರ ಜಯಂತಿ ಸಂದರ್ಭದಲ್ಲಿ ಅವರ ಪುತ್ರ ನಾರಾಯಣ ದೇಸಾಯಿ ಬರೆದ ಲೇಖನ ಬಹು ಆತ್ಮೀಯವಾಗಿದೆ. ಈ ಐತಿಹಾಸಿಕ ಲೇಖನವನ್ನು

('ಜನಪದವಿಚಾರದ' ಓದುಗರಿಗೆ ಅರ್ಪಿಸಲು ಸಂತೋಷವಾಗುತ್ತದೆ ಸಂ)

ಬಾಪೂ ಬಳಿಗೆ ಬಂದ ನಂತರದ ಇಪ್ಪತ್ತು ವರ್ಷಗಳಲ್ಲಿ ನನ್ನ ತಂದೆ ಎರಡುಸಲ ಮಾತ್ರ ರಜೆ ತೆಗೆದು ಕೊಂಡಿದ್ದರು, ಮೊದಲ ಸಲ ಟೈಫೈಡ್ ಆಗಿದ್ದರಿಂದ ಮತ್ತು ಎರಡನೆಸಲ ರಕ್ತದೊತ್ತಡ ಹೆಚ್ಚಾಗಿದ್ದರಿಂದ. ತಂದೆಯ ತಂದೆ(ನನ್ನ ತಾತ) ತೀರಿಕೊಂಡಾಗಲೂ ನನ್ನ ತಂದೆಯ ಕೆಲಸ ನಡೆದೇ ಇತ್ತು! ಇಪ್ಪತ್ತು ವರ್ಷದ ನಂತರ ಬಂದ ಖಾಯಿಲೆಯಿಂದಾಗಿ ಅನಿವಾರ್ಯವಾಗಿ ರಜೆ ತೆಗೆದುಕೊಂಡರು, ವಿಶ್ರಾಂತಿ ಪಡೆಯಲು ಶಿಮ್ಲಾ ಹೋದರು. ಮೂರನೆಯ ಸಲ ಖಾಯಿಲೆಯಾದಾಗ ಖಾಯಂ ಆಗಿ ರಜೆ ತೆಗೆದುಕೊಂಡರು. ಈ ಎರಡು ಅಪವಾದಗಳನ್ನು ಬಿಟ್ಟರೆ ಇಪ್ಪತ್ತೈದು ವರ್ಷಗಳಲ್ಲಿ ತಂದೆ ಒಂದೇಒಂದು ಭಾನುವಾರ, ದೀಪಾವಳಿ, ಹೋಳಿ ಅಥವಾ ಬೇಸಿಗೆ ರಜೆ ತೆಗೆದುಕೊಂಡಿರಲಿಲ್ಲ.

ಸಾವಿರ ಒಂಭೈನೂರ ಮುವ್ವತ್ತೆರಡರಲ್ಲಿ ಮಗನವಾಡಿಯಲ್ಲಿ ಇರುತ್ತಿದ್ದಾಗ ತಂದೆಗೆ ರಕ್ತದೊತ್ತಡ ಹೆಚ್ಚಾಯಿತು. ಮಧ್ಯೆ ಮಧ್ಯೆ ತಲೆಸುತ್ತುತ್ತಿತ್ತು. ಇದಕ್ಕೆ ಮುಖ್ಯ ಕಾರಣ ವಾರ್ಧಾದಲ್ಲಿಯ ವಿಪರೀತ ಬಿಸಿಲು. ಬಿಸಿಲಲ್ಲಿ ತಂದೆ ಪ್ರತಿದಿನ ವಾರ್ಧಾದಿಂದ ಸೇವಾಗ್ರಾಮಕ್ಕೆ ಬಂದು ಹೋಗುತ್ತಿದ್ದರು. ಕೆಲವೊಂದುಸಲ ಎರೆಡೆರಡುಸಲ ಹೋಯ-ಬಂದು ಮಾಡಬೇಕಿತ್ತು. ಒಟ್ಟು ಇಪ್ಪತ್ತೆರಡು ಮೈಲಿ ನಡಿಗೆಯಾಗುತ್ತಿತ್ತು! ವಾರ್ಧಾದಲ್ಲಿ ಬೇಸಿಗೆಕಾಲದಲ್ಲಿ ನೂರ ಹದಿನೈದರಿಂದ ನೂರ ಇಪ್ಪತ್ತು ಡಿಗ್ರಿ ತಾಪಮಾನ ಇರುತ್ತಿತ್ತು, ಇಷ್ಟು ಪರಿಶ್ರಮದ ನಂತರವೂ ಬಾಪೂವಿನ ಕೆಲಸದ ಭಾರವನ್ನು ತಂದೆ ಹೊರಲು ಸಮರ್ಥರಾಗಿರುತ್ತಿದ್ದರು. ನಾನು ಹತ್ತು ಹದಿನೈದು ವರ್ಷದವನಾಗಿದ್ದಾಗ ತಂದೆ ಪ್ರತಿನಿತ್ಯ ಹದಿನೈದು ಗಂಟೆಗಿಂತಲೂ ಕಡಿಮೆಕೆಲಸ ಮಾಡಿದ್ದನ್ನು ನೋಡಲಿಲ್ಲ. ನಾವು ಮಗನವಾಡಿಯಿಂದ ಸೇವಾಗ್ರಾಮಕ್ಕೆ ಇರಲು ಹೋದಾಗ ವಾರ್ಧಾದಿಂದ ಸೇವಾಗ್ರಾಮ ಹೋಗಿಬರುವ ಶ್ರಮ ಉಳಿಯಿತು. ಆದರೆ ಉಳಿತಾಯವಾದ ಈ ಸಮಯದಿಂದಾಗಿ ತಂದೆಯ ಕೆಲಸ ಹೆಚ್ಚಾಯಿತು. ದಿನದ ಕೆಲಸವನ್ನು ಪೂರ್ಣಮಾಡಿ ರಾತ್ರಿ ಮಲಗುವ ಮುನ್ನ ಯಾವುದಾದರು ಪುಸ್ತಕವನ್ನು ಓದುವುದು ತಂದೆಯ ಅಭ್ಯಾಸವಾಗಿತ್ತು. ಓದುವ ಬಗ್ಗೆ ಅವರು ಯಾವಾಗಲೂ ಚುರುಕಾಗಿರುತ್ತಿದ್ದರು. ವಾಲಜಿಭಾಯಿ ದೇಸಾಯಿ ಮತ್ತು ಪ್ಯಾರೆಲಾಲ್ ಈ ಇಬ್ಬರನ್ನು ಬಿಟ್ಟರೆ ಬಾಪೂವಿನ ಆಶ್ರಮದಲ್ಲಿ ತಂದೆಗಿಂತ

ಹೆಚ್ಚು ಓದುವವರು ಯಾರೂ ಇರಲಿಲ್ಲ. ಪ್ರತಿದಿನ ಬರುವ ಅಂಚೆಯನ್ನು ನೋಡಿ ಬಹಳಷ್ಟು ಪತ್ರಗಳಿಗೆ ಉತ್ತರ ಬರೆಯುವುದು, ಬಾಪೂವನ್ನು ಭೇಟಿ ಮಾಡಲು ಬರುವಂತವರ ಜೊತೆ ಪೂರ್ವಭಾವಿಯಾಗಿ ಮಾತನಾಡಿ ಬಾಪೂವಿನ ಸಮಯವನ್ನು ಉಳಿಸುವುದು, ಸಂದರ್ಶನಗಳ ವರದಿ ತಯಾರಿಸುವುದು, 'ಹರಿಜನ' ವಾರಪತ್ರಿಕೆಗಾಗಿ ಲೇಖನ ಬರೆಯುವುದು ಇಲ್ಲವೇ ಅನುವಾದ ಮಾಡುವುದು ಮುಂತಾದ ಕೆಲಸಗಳನ್ನು ಮಾಡುವುದು ಮುಖ್ಯವಾಗಿರುತ್ತಿದ್ದವು.

ಬಾಪೂವಿನ ಕೆಲಸದ ಪ್ರಮಾಣವೂ ಕೂಡ ಅಸಾಧಾರಣವಾಗಿತ್ತು. ಇಷ್ಟೆಲ್ಲ ಕೆಲಸವನ್ನು ತಂದೆ ಹೇಗೆ ಮಾಡುತ್ತಿದ್ದರೆಂಬುದು ಆಶ್ಚರ್ಯದ ವಿಷಯವಾಗಿತ್ತು. ಬಾಪೂ ಮತ್ತು ತಂದೆಯ ಮಧ್ಯೆ ಉಂಟಾಗಿದ್ದ ಅಸಾಧಾರಣವಾದ ಏಕಾತ್ಮತೆಯೇ ಇದಕ್ಕೆ ಕಾರಣ. ಈ ಸಂದರ್ಭದಲ್ಲಿ ದಾಸ್ಯ ಭಕ್ತಿ ಮತ್ತು ಸಖ್ಯ ಭಕ್ತಿ ಲಕ್ಷಣಗಳ ಬಹು ಆಶ್ಚರ್ಯಕಾರಕ ಸಂಯೋಗವಿತ್ತು. ಸಾವಿರದ ಒಂಭೈನೂರ ಹದಿನೈದರಲ್ಲಿ ಮೊದಲ ಬಾರಿಗೆ ನನ್ನ ತಂದೆ ಬಾಪೂ ಅವರನ್ನು ಭೇಟಿ ಮಾಡಲು ಅಹಮದಾಬಾದಿನ ಬಳಿಯಿರುವ ಕೋಚರಬ ಆಶ್ರಮಕ್ಕೆ ಹೋದರು. ಆಗ ತಂದೆ ಬರೆದಿದ್ದಂತ ವಿಷಯವನ್ನು ನೋಡಿ 'ನಿನ್ನ ಸ್ಥಾನ ನನ್ನ ಬಳಿಯೇ ಇದೆ' ಎಂದು ಬಾಪೂ ಅಂದರು. ಅಂದು ಪೋಲೀಸ್ ಬ್ರಿಜ್ ಬಳಿ ಹಿಂದಿರುಗಿ ಬರುತ್ತಿದ್ದಾಗ ತಂದೆ ದಿವಂಗತ ನರಹರಿ ಭಾಯಿ ಪರೀಖರೊಂದಿಗೆ 'ನನ್ನ ಜೀವನವಿಡೀ ಯಾರ ಬಳಿಯಾದರೂ ಇರುವುದಾದರೆ ಈ ಮನುಷ್ಯನ ಚರಣಗಳಲ್ಲಿಯೇ ಕಳೆಯಬೇಕೆಂದು ಅನಿಸುತ್ತದೆ' ಎಂಬುದಾಗಿ ಹೇಳಿದ್ದರು.

ತಂದೆಯ ವ್ಯಕ್ತಿತ್ವ ಬಾಪೂವಿನ ವ್ಯಕ್ತಿತ್ವದಿಂದ ತೀರ ಭಿನ್ನ ಮತ್ತು ಸ್ವತಂತ್ರವಾಗಿತ್ತು. ಬಾಪೂವಿನ ವಿಭೂತಿಯತ್ವ ಪ್ರಖರ ಸೂರ್ಯನಂತಿದ್ದರೆ ತಂದೆಯದು ಚಂದ್ರನಂತೆ ಶೀತಲವಾಗಿತ್ತು. ಬಾಪೂ ಅನಾಸಕ್ತ ಕರ್ಮಯೋಗಿಯಾಗಿದ್ದರೆ, ತಂದೆ ರಸಿಕ ಭಕ್ತ. ಬಾಪೂ ಹಿಮಾಲಯದ ತರಹ ಎತ್ತರ ಮತ್ತು ಉಜ್ವಲವಾಗಿದ್ದರೆ ತಂದೆ ಗಂಗೆಯಂತೆ ಕರುಣೆಯಿಂದ ತುಂಬಿದ್ದರು. ಇಷ್ಟೊಂದು ಭಿನ್ನ ವ್ಯಕ್ತಿತ್ವವಾಗಿದ್ದರೂ ಇಬ್ಬರಲ್ಲಿ ಆಶ್ಚರ್ಯಕರ ಆತ್ಮೀಯತೆ, ಅಭಿನ್ನತೆ ಇತ್ತು.

ಕೆಲವು ಉದಾಹರಣೆ ನೋಡಿ. ಸಾಹಿತ್ಯದ ದೃಷ್ಟಿಯಿಂದ ನೋಡಿದರೆ ಬಾಪೂ ಯಥಾರ್ತವಾದಿ ಆಗಿದ್ದರು, ಶಬ್ದಲಾಘವದಲ್ಲಿ ಸಾಮ್ರಾಟರಾಗಿದ್ದರು. ಒಂದು ಶಬ್ದದಿಂದ ಕೆಲಸವಾಗುವಂತಿದ್ದರೆ ಎರಡು ಶಬ್ದಗಳ ಉಪಯೋಗವನ್ನು ಮಾಡುವಂಥವರಾಗಿದ್ದರು. ತಂದೆ ಸ್ವೈರ ವಿಹಾರ ಮಾಡುವಂತಿದ್ದರು. ಸಮುಚಿತ ಅಲಂಕಾರ ಯುಕ್ತ ರಸಮಯ ಶೈಲಿಯಲ್ಲಿ ಬರೆಯುವಂಥವರಾಗಿದ್ದರು. ಆದರೂ ಕೂಡ ಲೇಖನಗಳಲ್ಲಿ ಬಾಪೂವಿನ ಶೈಲಿಯನ್ನು ತಂದೆ ಸರಿಯಾಗಿ ಆತ್ಮಸತ್ ಮಾಡಿಕೊಂಡಿದ್ದರು. 'ಹರಿಜನ' ಅಥವಾ 'ಹರಿಜನ ಬಂಧು'ವಿನ ಅನೇಕ ಓದುಗರ ಪತ್ರಗಳು ಬರುತ್ತಿದ್ದವು. ಲೇಖನದ ಕೊನೆಗೆ ಎಂ.ಕೆ.ಜಿ, ಅಥವಾ ಎಮ್.ಡಿ ಅಕ್ಷರ ಓದುವವರೆಗೂ ಲೇಖನ ಬಾಪೂವಿನದೇ ಅಥವಾ ಮಹಾದೇವ ಭಾಯಿಯವರದೇ ಎಂದು ಗೊತ್ತಾಗುತ್ತಿರಲಿಲ್ಲ. 'ಹರಿಜನ'

ಪತ್ರಿಕೆಗೆ ತಂದೆಯವರು ಬರೆಯುತ್ತಿದ್ದ ಯಾವುದೇ ಲೇಖನವನ್ನು ಬಾಪೂಗೆ ತೋರಿಸದೆ ಪ್ರೆಸ್ಸಿಗೆ ಕಳುಹಿಸುತ್ತಿರಲಿಲ್ಲ ಬಾಪೂ ಕೂಡ ಅವರ ಲೇಖನಗಳನ್ನು ಸೂಕ್ಷ್ಮವಾಗಿ ಓದುತ್ತಿದ್ದರು. ಅವಶ್ಯಕ ಸುಧಾರಣೆ ಕೂಡ ಮಾಡುತ್ತಿದ್ದರು. ಅನೇಕ ಸಲ ತಂದೆ ಬರೆದ ಲೇಖನವನ್ನು ಬಾಪೂಗೆ ನೋಡಲು ಇಡುತ್ತಿದ್ದರು. ಅದನ್ನು ಓದಿ ಬಾಪೂ ತಮ್ಮ ಹಸ್ತಾಕ್ಷರ ಹಾಕುತ್ತಿದ್ದರು. ಆಗ ಆ ಲೇಖನ ಬಾಪೂವಿನದಾಗುತ್ತಿತ್ತು. ಸಾವಿರದ ಒಂಭೈನೂರ ನಲವತ್ತೆರಡರ ಚಳುವಳಿಯ ಮೊದಲು ಪ್ರತಿಯೋರ್ವ ಇಂಗ್ಲೀಷನಿಗೆ ವಿನಂತಿ ಎಂಬ ಲೇಖನ ಇತ್ತು. ಮತ್ತು ಪ್ರತಿಯೋರ್ವ ಜಪನೀಯನಿಗೂ ವಿನಂತಿ ಎಂಬ ಲೇಖನವೂ ಇತ್ತು.

ಬಾಪೂವಿನ ಹೆಚ್ಚು ಸಮಯ ನಷ್ಟವಾಗದಿರದೆಂಬ ದೃಷ್ಟಿಯಿಂದ ರಾಜಾಜಿ, ಭೋಲಾಭಾಯಿ ಮತ್ತು ಕೆಲವೊಂದು ಸಲ ಜವಹರಲಾಲ್‌ಜಿ ಕೂಡ ತಂದೆಯ ಜೊತೆಗೆ ಚರ್ಚೆಮಾಡಿ ಬಹಳಷ್ಟು ಕೆಲಸವನ್ನು ಮಾಡಿಮುಗಿಸುತ್ತಿದ್ದರು. ಅಂದಿನ ದಿನಗಳಲ್ಲಿ ಸರ್ದಾರರಿಂದ ಟ್ರಂಕ್ ಕಾಲ್ ಬರದೇ ಇದ್ದ ದಿನವೇ ಇರಲಿಲ್ಲ. ಆ ಮುದುಕ ಏನು ಹೇಳುತ್ತಾನೆ ಎಂಬ ಮಾತಿನಿಂದ ಮಾತುಕತೆ ಪ್ರಾರಂಭವಾಗುತ್ತಿತ್ತು. ತಂದೆಗೆ ಶೀಘ್ರಲಿಪಿ ಗೊತ್ತಿರಲಿಲ್ಲ. ಆದರೂ ಕೂಡ ಅವರ ಬರೆಯುವ ಶೈಲಿಯ ಗತಿ ಅಸಮಾನ್ಯವಾಗಿತ್ತು. ಅನೇಕ ಶಬ್ದಗಳನ್ನು ಅವರು ಸಂಕ್ಷಿಪ್ತವಾಗಿ ಬರೆಯುತ್ತಿದ್ದರು. ಬಾಪೂವಿನ ಮುಖದಿಂದ ಬಂದ ಒಂದು ಶಬ್ದವನ್ನೂ ಅವರು ಬಿಡುತ್ತಿರಲಿಲ್ಲ. ಒಂದು ಸಲ ಬಾಪೂವಿನೊಂದಿಗೆ ಚರ್ಚೆಮಾಡಲು ಕೆಲ ಅಮೇರಿಕೆಯ ಮಿತ್ರರು ಬಂದಿದ್ದರು. ತಂದೆಯವರು ತಮ್ಮದೇ ಆದ ರೀತಿಯಲ್ಲಿ ಚರ್ಚೆಯ ಟಿಪ್ಪಣಿ ಬರೆದುಕೊಳ್ಳುತ್ತಿದ್ದರು. ಅಮೇರಿಕೆಯ ಮಿತ್ರರಲ್ಲಿ ಓರ್ವ ಸಹೋದರಿ ಶೀಘ್ರಲಿಪಿಯಲ್ಲಿ ಬರೆದುಕೊಳ್ಳುತ್ತಿದ್ದಳು ಮಾರನೇ ದಿನ ತಂದೆಯವರು ಮತ್ತು ಆ ಸಹೋದರಿ ತಮ್ಮ ತಮ್ಮ ಟಿಪ್ಪಣಿಯನ್ನು ಪರಸ್ಪರ ಹೊಂದಿಸ ನೋಡತೊಡಗಿದರು. ತಂದೆಯವರ ಟಿಪ್ಪಣಿಯನ್ನು ನೋಡಿ 'ನೀವು ನನ್ನನ್ನು ಪೂರ್ಣವಾಗಿ ಸೋಲಿಸಿದ್ದೀರಿ' ಎಂದು ಉದ್ಗಾರ ತೆಗೆದಳು.

ಬಾಪೂವಿನ ಭಾಷಣಗಳನ್ನು ವರದಿ ಮಾಡುವ, ಬರೆಯುವ ಸಮಯದಲ್ಲಿ ತಂದೆ ಬಾಪೂ ಏನನ್ನು ಮಾತನಾಡಿದ್ದರು ಅಷ್ಟನ್ನೇ ಬರೆಯುತ್ತಿರಲಿಲ್ಲ. ಬಾಪೂವಿನ ಭಾಷಣ ಅನೇಕ ಬಾರಿ ಕ್ರಮಬದ್ಧವಾಗಿಯಾಗಲಿ, ವ್ಯವಸ್ಥಿತವಾಗಿಯಾಗಲಿ ಇರುತ್ತಿರಲಿಲ್ಲ. ಅವರ ಭಾಷಣದಲ್ಲಿ ಸಹಜತೆ ಇರುತ್ತಿತ್ತು, ಕ್ರಮಬದ್ಧತೆ ಇರುತ್ತಿರಲಿಲ್ಲ. ಆದರೆ ತಂದೆಯವರು ಭಾಷಣದ ರಿಪೋರ್ಟು ಬರೆಯುವ ಸಂದರ್ಭದಲ್ಲಿ ಅದನ್ನು ಸರಿಮಾಡುತ್ತಿದ್ದರು. ಪೈಜಪೂರ್ ಕಾಂಗ್ರೆಸ್ ಸಮಯದಲ್ಲಿ ಬಾಪೂವಿನ ಹಿಂದಿ ಭಾಷಣವನ್ನು ತಂದೆಯವರು ನೇರವಾಗಿ ಪ್ರೆಸ್ ಟೆಲಿಗ್ರಾಮ್ ಪಾರಂನಲ್ಲಿ ಇಂಗ್ಲೀಷ್‌ನಲ್ಲಿ ಬರೆದರು. ಏಕೆಂದರೆ ಭಾಷಣ ಮುಗಿಯುತ್ತಿದ್ದಂತೆಯೇ ಅದನ್ನು ಪತ್ರಿಕೆಗಳಿಗೆ ಬಿಡುಗಡೆ ಆಗಲು ಅನುಕೂಲವಾಗಲೆಂದು. ಬಾಪೂ ಭಾಷಣದಲ್ಲಿ ಏನು ಹೇಳಿದರೆಂಬುದನ್ನು ಸ್ಪಷ್ಟರೂಪದಲ್ಲಿ ಹೇಳಲಾಗುತ್ತಿರಲಿಲ್ಲ. 'ಮಹದೇವ ಭಾಯಿಯವರ ರಿಪೋರ್ಟ್

ನಂತರ ಓದುವೆನು' ಎಂದು ಹೇಳಿ ಸಂತೋಷ ಪಡುತ್ತಿದ್ದರು. ಈ ತಾದ್ಯಾತ್ಮದ ಕಲ್ಪನೆ ಎಲ್ಲರಿಗೂ ಬರಲು ಸಾಧ್ಯವಿರಲಿಲ್ಲ. ಒಂದು ಸಲ ಓರ್ವ ಪಂಜಾಬಿ ಸಹೋದರ ಬಾಪೂನನ್ನು ಭೇಟಿಮಾಡಲು ಬಂದಿದ್ದನು. ಅವನೊಂದಿಗೆ ತಂದೆ ಮಾತನಾಡಿ ಅವನಿಗೆ 'ಇನ್ನು ನೀವು ಬಾಪೂವನ್ನು ಭೇಟಿ ಮಾಡುವ ಅವಶ್ಯಕತೆ ಇಲ್ಲ' ಎಂದು ಹೇಳಿದರು. ಆದರೆ ಆ ಸಹೋದರನಿಗೆ ಸಂತೋಷವಾಗಲಿಲ್ಲ. ಎರಡನೇ ಸಲ ತಂದೆಯೊಂದಿಗೆ ಚರ್ಚೆಮಾಡಿ ಅವನು ಹಿಂದಿರುಗಿದ. ಆದರೆ ಹೋಗುವಾಗ ಆಶ್ರಮವಾಸಿಗಳಿಗೆ ಹೇಳಿಹೋದ, ಏನೆಂದರೆ 'ಮಹದೇವ ಭಾಯಿಯನ್ನು ನಾನು ಅಗತ್ಯವಾಗಿ ಗುಂಡುಹೊಡೆದು ಸಾಯಿಸುತ್ತೇನೆ', ಈ ಮಾತನ್ನು ಕೇಳಿ ನನ್ನ ತಾಯಿ ಹೆದರಿದಳು, ಆದರೆ ತಂದೆಯವರು ಗಹಗಹಿಸಿ ನಕ್ಕರು.

ಒಂದು ಸಲ ಬಾಪೂ ಏಕಾತ್ಮತೆಯ ಒಂದು ಆಶ್ಚರ್ಯಕರ ಪ್ರಸಂಗ ನೋಡಿದರು. ಬಾಪೂ ತಮ್ಮ ಗುಡಿಸಲಿನ ಎದುರಿನಲ್ಲಿ ನಿಂತಿದ್ದರು. ತಂದೆಯವರ ಜೊತೆಗೆ ಮಾತುಕತೆ ನಡೆಯುತ್ತಿತ್ತು. ಅಷ್ಟರಲ್ಲಿ ಅವರಿಗೆ ಏನನ್ನೋ ಬರೆಯುವ ಮಾತು ನೆನಪಿಗೆ ಬಂತು. ಬಾಪೂ ತಂದೆಯವರಿಗೆ ಹೇಳಿದರು 'ಮಹದೇವ್, ಬರೆದುಕೊ, ತಂದೆಯವರು ನಿಂತುಕೊಂಡೆ ಬರೆದುಕೊಳ್ಳಲು ಪ್ರಾರಂಭಿಸಿದರು. ಬಾಪೂ ಹೇಳುತ್ತಾ ಹೋದರು ಮತ್ತು ತಂದೆಯವರು ಬರೆಯುತ್ತಾ ಹೋದರು. ನಾನು ಪಕ್ಕದಲ್ಲೇ ನಿಂತು ನೋಡುತ್ತಿದ್ದೆ. ಸ್ವಲ್ಪ ಸಮಯದ ನಂತರ ಬಾಪೂವಿನ ಹೇಳುವ ವೇಗಕ್ಕಿಂತ ತಂದೆಯವರ ಬರೆಯುವ ವೇಗ ತೀವ್ರವಾಯಿತು. ಅಂದರೆ ಮುಂದೆ ಬಾಪೂ ಏನು ಹೇಳುತ್ತಾರೆ ಇದರ ಅನುಮಾನ ಮಾಡಿ ತಂದೆ ಮೊದಲೇ ಬರೆದು ಬಿಡುತ್ತಿದ್ದರು. ಮಧ್ಯೆಯಲ್ಲಿ ಬಾಪೂ ಒಂದು ಶಬ್ದ ಹೇಳಿದ್ದು ತಂದೆ ಬರೆದುಕೊಂಡಿರಲಿಲ್ಲ ಆಗ ತಂದೆ ಬಾಪೂನನ್ನು ತಡೆದು ಹೇಳಿದರು. 'ಬಾಪೂ ಸ್ವಲ್ಪ ನಿಲ್ಲಿ, ನಾನು ಈ ಸ್ಥಳದಲ್ಲಿ ಬೇರೆಯೇ ಶಬ್ದ ಬರೆದಿದ್ದೆ ನೀವು ಈ ಶಬ್ದದ ಪ್ರಯೋಗ ಏಕೆ ಮಾಡಿದಿರಿ'? ಬಾಪೂ ಒಂದು ಕ್ಷಣ ವಿಚಾರದಲ್ಲಿ ಬಿದ್ದರು. ಅವರೂ ಕೂಡ ಶಬ್ದಗಳ ಬಗ್ಗೆ ಬಹಳ ಆಗ್ರಹಿ ಇದ್ದರು. 'ಮಹದೇವ್ ನೀನು ಈ ಶಬ್ದವನ್ನು ಹೇಗೆ ಬರೆದೆ? ನನ್ನ ಬಾಯಿಯಿಂದ ಅದೇ ಶಬ್ದ ಬಂದಿತಲ್ಲ.

ಪತ್ರ ಬರೆಯುವುದರಲ್ಲಿ ಎಷ್ಟು ಸಮಯ ಕಳೆಯಿತ್ತಿತ್ತೋ ಅದಕ್ಕಿಂತ ಹೆಚ್ಚು ಸಮಯ ಬಾಪೂನ ಭಾಷೆಯಲ್ಲಿ ಯಾವ ಶಬ್ದ ಸರಿ ಹೊಂದುತ್ತದೆ ಎಂಬ ವಿಷಯದ ಬಗ್ಗೆಯೇ ಚರ್ಚೆಯಾಗುತ್ತಿತ್ತು. ಬಾಪೂ ಹೇಳಿದ ಶಬ್ದವನ್ನೇ ಉಳಿಸಿಕೊಳ್ಳುತ್ತಿದ್ದರೂ ಮಹದೇವ ಭಾಯಿಯವರ ಶಬ್ದದಲ್ಲಿ ಸಾರವಿತ್ತೆಂಬುದನ್ನು ಬಾಪೂ ನಂತರ ಸ್ವೀಕರಿಸಿಯೇ ಸ್ವೀಕರಿಸುತ್ತಿದ್ದರು.

ಸಾಭಾರ ಸರ್ವೋದಯ ಜಗತ್ತು ಅನು ಸು.ಕೌ,

ನಾಲ್ಕೂ ನಿಟ್ಟಿನಿಂದ

ಹೆಚ್ಚುತ್ತಿರುವ ಶಾಲಾ ಪರೀಕ್ಷೆಗಳು ನಮ್ಮ ಕಲಿಕೆ ಮತ್ತು ಶೈಕ್ಷಣಿಕ ತರಬೇತಿಗಳ ಸಮಯನ್ನು ಆವರಿಸಿಕೊಂಡಿರುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ನಮ್ಮ ಹೊಸ ಶಿಕ್ಷಣ ನೀತಿಯು ಪರೀಕ್ಷೆಗಳಿಗೆ ಸಂಬಧಿಸಿದ ಸುಧಾರಣೆಗಳನ್ನು ತರುವ ಜರೂರ ಇದೆ. **–ಎನ್.ಎಸ್.ಗುಂಡುರ್.**

***

ಹಿಂಸೆಯ ಸಂಸ್ಕೃತಿ ಅಥವಾ ಪ್ರವೃತ್ತಿ ಅಂತಿಮವಾಗಿ ಅದನ್ನು ಸೃಷ್ಠಿಸುವ ಸಮಾಜದ ವಿರುದ್ಧವೇ ತಿರುಗುತ್ತದೆ. ಹಾಗಾಗಿಯೇ ಗಾಂಧಿ ಹೀಗೆ ಹೇಳುತ್ತಾರೆ. "ನಮ್ಮ ಪ್ರಗತಿಗೆ ತಡೆಯಾಗಿರುವ ಅನಾಚಾರಗಳಿಂದ ಸಮಾಜವನ್ನು ಬಿಡಿಸುವುದಕ್ಕಾಗಿ ಹಿಂಸೆಯ ಮೋರೆಹೋದರೆ, ನಾವು ನಮ್ಮ ಕಷ್ಟಗಳನ್ನು ಹೆಚ್ಚಿಸುವವೆಲ್ಲದೆ ಬೇರೇನನ್ನು ಮಾಡುವುದಿಲ್ಲ. ಸ್ವಾತಂತ್ರ್ಯದ ದಿನವನ್ನು ಮುಂದುಡುತ್ತಲೇ ಹೋಗುತ್ತೇವೆಂಬುದನ್ನು ಅರ್ಥ ಮಾಡಿಕೊಳ್ಳಲು ದೊಡ್ಡ ಭೌದ್ಧಿಕ ಪ್ರಯತ್ನವೇನು ಬೇಕಾಗಿಲ್ಲ."

–ರಾಮಚಂದ್ರ ಗುಹಾ.

***

ವಾಹನಗಳಿಂದ ಉಂಟಾಗುತ್ತಿರುವ ಮಾಲಿನ್ಯತೆಯನ್ನು ಕಡಿಮೆ ಮಾಡಲು ಇರುವ ಒಂದೇ ಒಂದು ಉಪಾಯವೆಂದರೆ ಮಹಾನಗರಗಳಲ್ಲಿ ಕಾರುಗಳ ಮಾರಾಟ ಮತ್ತು ಖರೀದಿಯನ್ನು ನಿಷೇಧಿಸುವುದೇ ಆಗಿದೆ. ರಸ್ತೆಗಳು ಹೆಚ್ಚುತ್ತಿರುವ ಕಾರುಗಳ ಸಂಚಾರವನ್ನು ತಡೆಯಲು ಸಾಧ್ಯವಿಲ್ಲದಿರುವಾಗ ಕಾರುಗಳ ಮಾರಾಟಕ್ಕೆ ಹೇಗೆತಾನೆ ಅನುಮತಿ ಇರಬೇಕು? ವಾಹನಗಳ ನಿಷೇಧದ ಹಿಂದೆ ಒಂದು ತರ್ಕವಿದೆ. ಚಲನಚಿತ್ರ ಪ್ರದರ್ಶನದ ಥಿಯೇಟರ್‌ನಲ್ಲಿಯ ಸೀಟುಗಳು ತುಂಬಿದ ಮೇಲೆ ಟಿಕೇಟ್‌ಗಳ ಮಾರಾಟವನ್ನು ನಿಲ್ಲಿಸಲಾಗುತ್ತದೆ. ಅದೇ ರೀತಿ ರೈಲುಗಳು ಮತ್ತು ವಿಮಾನಗಳ ಟಿಕೇಟ್‌ಗಳು. ಆದ್ದರಿಂದ ವಾಹನಗಳ ಮಾರಾಟದಬಗ್ಗೆ ಏಕಿಲ್ಲ ? ಸಮ ಮತ್ತು ಬೆಸ ಸಂಖ್ಯೆಯ ವಾಹನಗಳ ಓಡಾಟದ ನಿಯಮ ಸಮಸ್ಯೆಯನ್ನು ಬಗೆಹರಿಸಲಾರದು. ಸಮಸ್ಯೆ ಇನ್ನೂ ಉಲ್ಬಣಗೊಳ್ಳುವುದು.

–ಮಹೇಶ್ ಕುಮಾರ್

ಸಾದರ - ಸ್ವೀಕಾರ

ಪುಸ್ತಕದ ಹೆಸರು	:	**ಎದೆ ತುಂಬಿ ಆಡಿದೆನು**
ಲೇಖಕರು	:	ಟಿ.ಎಸ್.ಛಾಯಾಪತಿ
ಪ್ರಕಾಶಕರು	:	ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ ಮೂರನೆಯ ಹಂತ, ಮೈಸೂರು-೨
ಬೆಲೆ	:	೬೦ ರೂ
ಪ್ರಕಟಣೆಯ ವರ್ಷ	:	೨೦೧೫

ಪುಸ್ತಕದ ಲೇಖಕರಾದ ಟಿ.ಎಸ್.ಛಾಯಾಪತಿಯವರು ತ.ಸು.ಶ್ಯಾಮರಾಯರ ಸುಪುತ್ರರು. ತಾತನವರಿಂದ ಬಂದಿದ್ದ ಪುಸ್ತಕಗಳ ಪ್ರಕಟಣೆಯ ಪರಂಪರೆಯನ್ನು ಬಹುಯಶಸ್ವಿಯಾಗಿ ಮುಂದುವರೆಸಿಕೊಂಡು ಬಂದಿರುವ ವ್ಯಕ್ತಿ. ಈಗ ಅವರೇ ಲೇಖಕರಾಗಿ ಆ ಪ್ರಕಟಣೆಯ ಸಂಸ್ಥೆಯಿಂದಲೇ ಪುಸ್ತಕ ಪ್ರಕಟಿಸಿದ್ದಾರೆ. ಕವಿ ಜಿ.ಎಸ್.ಶಿವರುದ್ರಪ್ಪನವರು ಎದೆ ತುಂಬಿ ಹಾಡಿದರು. ಅವರ ಅಭಿಮಾನಿಯಾಗಿ ಅವರ ನಿಕಟ ಸಂಪರ್ಕಕ್ಕೆ ಬಂದ ಲೇಖಕರು ತಮ್ಮ ಈ ಪುಸ್ತಕದಲ್ಲಿ ಶಿವರುದ್ರಪ್ಪನವರ ಬಗ್ಗೆ ಎದೆ ತುಂಬ ಅಭಿಮಾನ ಪೂರ್ವಕವಾಗಿ ಮಾತನಾಡಿದ್ದಾರೆ. ಅವರ ಸಂಪರ್ಕದಲ್ಲಿ ಬಂದಾಗ ಅವರೊಂದಿಗೆ ಮಾತನಾಡಿದ ಸಂದರ್ಭಗಳನ್ನು, ನಡೆದ ಕೆಲವು ಘಟನೆಗಳನ್ನು ಮತ್ತು ಸಂಪರ್ಕಕ್ಕೆ ಬಂದ ಬೇರೆ ಸಾಹಿತಿಗಳ ಜೊತೆಗಿನ ಒಳನೋಟಗಳನ್ನು ಛಾಯಾಪತಿಯವರು ಈ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಶಿವರುದ್ರಪ್ಪನವರ ಸ್ವಾಭಿಮಾನ, ಶಿಷ್ಯಪ್ರೀತಿ, ಹಿರಿಯರ ಬಗೆಗಿನ ಪ್ರೀತ್ಯಾದರ. ನಿಷ್ಠುರ ನಿಲುವು, ಗಂಭೀರ ಸ್ವಭಾವ ತಿಳಿಸುವ ಕೆಲ ನುಡಿಚಿತ್ರಗಳು ಈ ಪುಸ್ತಕದಲ್ಲಿ ಇವೆ. ತನ್ಮೂಲಕ ಛಾಯಾಪತಿಯವರು ಶಿವರುದ್ರಪ್ಪನವರ ವ್ಯಕ್ತಿತ್ವವನ್ನು ಆತ್ಮೀಯವಾಗಿ ಪರಿಚಯಿಸಿದ್ದಾರೆ.

ಜನಪದ ಸೇವಾ ಟ್ರಸ್ಟ್ ಸಮಾಚಾರ

ಶ್ರೀ ಅನಂತಮೂರ್ತಿ ಎಂಬುವವರು ಟ್ರಸ್ಟ್‌ಗೆ ಭೇಟಿ ಕೊಟ್ಟು ಉದಾರವಾಗಿ ೧೦ ಸಹಸ್ರ ರೂಪಾಯಿಗಳನ್ನು ದಾನವಾಗಿ ಕೊಟ್ಟರು. ಅವರಿಗೆ ಟ್ರಸ್ಟ್ ಆಬಾರಿಯಾಗಿದೆ. ಸಾಗರ ತಾಲ್ಲೂಕ ಹೆಗ್ಗೋಡಿನಲ್ಲಿ ನಡೆದ ಕೈಮಗ್ಗಕ್ಕೆ ಸಂಬಂಧಿಸಿದ ರಾಷ್ಟ್ರೀಯ ಕಾರ್ಯಗಾರರಲ್ಲಿ ಟ್ರಸ್ಟ್ ಪರವಾಗಿ ಮತ್ತು ಧಾರವಾಡ ಜಿಲ್ಲೆಯಲ್ಲಿ ನಡೆದ ಸುಸ್ಥಿರ ಬದುಕು ಎಂಬ ಪಾದಯಾತ್ರೆಯಲ್ಲಿ ಸುಮನಸ್ ಕೌಲಗಿ ಭಾಗವಹಿಸಿದರು. ರಾಜ್ಯದ ವಿವಿದ ಜಿಲ್ಲೆಗಳ ಕಟ್ಟಡ ನಿರ್ಮಾಣದಾರರು ಮತ್ತು ಕಟ್ಟಡ ವಿನ್ಯಾಸಕಾರರು ಟ್ರಸ್ಟ್‌ನ ಹೊಸ ಜೀವನ ದಾರಿ ಕೇಂದ್ರದಲ್ಲಿ ಒಂದು ದಿನದ ವಸತಿ ಮಾಡಿದರು. ಅವರು ಸುಮಾರು ೩೦ ಜನರಿದ್ದರು. ಈ ತಂಡದ ನೇತೃತ್ವವನ್ನು ಎಮ್.ಎನ್.ನಾಗರಾಜ ಮತ್ತು ಸತ್ಯಪ್ರಕಾಶ ವಾರಾಣಾಸಿ ಇವರು ವಹಿಸಿದ್ದರು. ಇಂಗ್ಲೇಡಿನ ಸ್ಯಾಲಿ ಮೇಸನ್ ಎಂಬುವರು ಟ್ರಸ್ಟ್‌ಗೆ ಬಂದು ಖಾದಿ ಬಟ್ಟೆ ಕರಿದಿಸಿದರು. ಅವರು ಸಿದ್ಧ ಉಡುಪು ವಿನ್ಯಾಸಕಿಯಾಗಿದ್ದಾರೆ. ಟ್ರಸ್ಟಿನ ಅಭಿಮಾನಿಗಳಾದ ರಮಾಕಾಂತ ಆನವಟ್ಟಿ ಮತ್ತು ಸರಸ್ವತಿ ಟ್ರಸ್ಟಿಗೆ ಬೇಟಿಕೊಟ್ಟರು. ಈಗತಾನೆ ಪೌಢಾವಸ್ತೆ ತಲುಪಿ ಪ್ರಾಪಂಚಿಕ ಜೀವನದಲ್ಲಿ ಪಾದಾರ್ಪಣೆ ಮಾಡುತ್ತಿರುವ ಯುವಕರಲ್ಲಿ ತಮ್ಮ ಜೀವನ ರೂಪಿಸಿಕೊಳ್ಳುವ ಬಗ್ಗೆ ಗೊಂದಲವಿರುತ್ತದೆ; ಸ್ಪಷ್ಟತೆ ಇರುವುದಿಲ್ಲ. ಹಣದ ಸಂಪಾದನೆಯೇ ಮುಖ್ಯವಾದ ಗುರಿಯುಳ್ಳ ಕೆಲಸದ ಬಗ್ಗೆಯೇ ಅವರ ಗಮನವಿರುತ್ತದೆ. ಇಂತ ಮನೋಸ್ಥಿತಿಯಲ್ಲಿರುವ ಕೆಲವು ಯುವಕರ ವಿಚಾರಮಂಥನದ ಒಂದು ಶಿಬಿರ ಹೊಸ ಜೀವನ ದಾರಿ ಕೇಂದ್ರದಲ್ಲಿ ನಡೆಯಿತು. ಸುಮಾರು ೨೦ ಜನ ಯುವಕರು ಭಾಗವಹಿಸಿದ್ದರು. ಟ್ರಸ್ಟ್ ನಡೆಸುತ್ತಿದ ೭೨ ರ ದಶಕದಲ್ಲಿ ವಯಸ್ಕ ಮಹಿಳೆಯರಿಗಾಗಿ ನಡೆಸುತ್ತಿದ್ದಾರೆ. ಸಂಕ್ಷಿಪ್ತ ಶಿಕ್ಷಣ ಶಾಲೆಯ ಹಿಂದಿನ ವಿದ್ಯಾರ್ಥಿನಿ ಕಮಲಮ್ಮ ಎಂಬುವರು ಟ್ರಸ್ಟ್‌ಗೆ ಬೇಟಿಕೊಟ್ಟರು. ಈಗ ಅವರು ಶಿಕ್ಷಕರಾಗಿ ಕೆಲಸ ಮಾಡಿ ನೀವೃತ್ತರಾಗಿದ್ದಾರೆ. ಮಂಡ್ಯ ಜಿಲ್ಲೆಯ ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯರು ಟ್ರಸ್ಟಿನ ದತ್ತು ಕೇಂದ್ರಕ್ಕೆ ಬೇಟಿ ಕೊಟ್ಟು ಪರೀಶಿಲಿಸಿ ತಮ್ಮ ಸಮಾಧಾನ ವ್ಯಕ್ತಪಡಿಸಿದರು. ಟ್ರಸ್ಟಿನಲ್ಲಿರುವ ಖಾದಿ ಉತ್ಪಾದನೆಗಾಗಿ ಖಾದಿ ನೂಲಿಗೆ ಮತ್ತು ನೇಯ್ದ ಬಟ್ಟೆಗೆ ಬಣ್ಣ ಹಾಕುವ ಕೆಲಸ ನಡೆಯುತ್ತದೆ. ಸಾವಯಾವ ಬಣ್ಣ ಹಾಕಲಾಗುತ್ತದೆ. ಈ ಕೆಲಸದಲ್ಲಿ ಉಂಟಾಗಿರಬಹುದಾದ ಹೊಸ ವಿಧಾನಗಳನ್ನು ತಿಳಿಯಲು ಮತ್ತು ದಕ್ಷತೆಯನ್ನು ಹೆಚ್ಚಿಸಿಕೊಳ್ಳಲು ಅನುಕೂಲವಾಗಲೆಂದು ಟ್ರಸ್ಟಿನ ಕಾರ್ಯಕರ್ತರಾದ ಸುರೇಶ ಮತ್ತು ಲೋಕೇಶ ಎಂಬ ಇಬ್ಬರು ಕಾರ್ಯಕರ್ತರನ್ನು ಹೈದ್ರಾಬಾದಿನಲ್ಲಿರುವ ರಾಷ್ಟೀಯ ಸಂಸ್ಥೆಯೊಂದರಲ್ಲಿ ಪ್ರಶಿಕ್ಷಣ ಪಡೆಯಲು ಕಳುಹಿಸಲಾಯಿತು. ಒಂದು ವಾರದ ಶಿಕ್ಷಣ ಪಡೆದು ಹಿಂದಿರಿಗಿದ್ದಾರೆ.

ಸನ್ಮಾನ್ಯರಿಂದ

ನಾನು ಓದಿದ ಇತ್ತೀಚಿನ ಚಿಂತನಪರ ಲೇಖನಗಳಲ್ಲಿ 'ಅಶಾಂತಿಯ ಕುದಿತದಲ್ಲಿ ಜಗತ್ತು' ಬಹಳ ಮಹತ್ವದ್ದು. ಕಾಲ ಕಳೆದಂತೆ ಜಗತ್ತನ್ನು ಶಾಂತಿಗೆ ಬದಲಾಗಿ ಅಶಾಂತಿ ಅಪ್ಪಿಕೊಳ್ಳುತ್ತಿದೆ. ರಾಷ್ಟ್ರರಾಷ್ಟ್ರಗಳ ನಡುವೆ ಆಂತರಿಕವಾಗಿ ಕುದಿಗೊಳ್ಳುತ್ತಿರುವ ಅಸಹನೆ ಯಾವ ಕ್ಷಣದಲ್ಲಾದರು ಸಿಡಿದು ಬಹುತೇಕ ರಾಷ್ಟ್ರಗಳು ಅನಪೇಕ್ಷಿತವಾಗಿ ಹುಟ್ಟು ಹಾಕಿಕೊಂಡಿರುವ ಜಲಜನಕ ಬಾಂಬ್ ಹಾಗು ಇನ್ನಿತರ ಅಣ್ವಸ್ತ್ರಗಳು ಇಡೀ ಭೂಮಿಯನ್ನು ಬಲಿಗೊಂಡಿಬಿಡುವ ಅಪಾಯದ ಸೂಕ್ಷ್ಮತೆಯತ್ತ ಎಚ್ಚರಿಕೆಯನ್ನು ನೀಡುವ ಈ ಲೇಖನದ ಸತ್ವವನ್ನು ಗಂಭೀರವಾಗಿ ಪರಿಗಣಿಸಬೇಕಾದ ತುರ್ತು ಎಲ್ಲ ರಾಷ್ಟ್ರಗಳ, ಜೀವಜಗತ್ತನ್ನು ಪ್ರೀತಿಸುವ ಶಾಂತಿಪ್ರಿಯರದ್ದಾಗಿದೆ.

ಜಗದೀಶ್ ಕೊಪ್ಪ ಅವರ ಹಾಗೂ ಪ್ರಸನ್ನಅವರ ಲೇಖನಗಳು ಪರಿಣಾಮ ಕಾರಿಯಾಗಿವೆ.

–ಜ.ಹೊ.ನಾರಯಣಸ್ವಾಮಿ, ಹಾಸನ.

* * *

ನನ್ನ ಸೋದರ ಪ್ರಕಾಶ್ ಬುರ್ಡೆ ಆಕಸ್ಮಿಕವಾಗಿ ನಿಧನ ಹೊಂದಿದ ವಾರ್ತೆ ನಿಮಗೆ ತಿಳಿದು ಸಾಂತ್ವನ ತಿಳಿಸಿದ್ದಕ್ಕಾಗಿ ಋಣಿ. ಐವತ್ತು ವರ್ಷಕ್ಕೂ ಮೀರಿ ಮಹಾರಾಷ್ಟ್ರದಲ್ಲಿದ್ದು ಕನ್ನಡದ ಉಳಿವಿಗಾಗಿ ಆತ ಹಲ ಬಗೆಯಲ್ಲಿ ದುಡಿದವ. ಮುಖ್ಯವಾಗಿ ಕರ್ನಾಟಕದ ಹಿಂದೂಸ್ಥಾನಿ ಸಂಗೀತಗಾರರು, ಜಾನಪದ ಕಲಾಕಾರರು, ಸಾಹಿತಿಗಳನ್ನೆಲ್ಲ ಕರೆಸಿ ಕಾರ್ಯಕ್ರಮಗಳನ್ನು ಏರ್ಪಡಿಸುತಿದ್ದ. 'ಕಲಾಭಾರತಿ' ಎಂದು ಆತ ಸಂಗಡಿಗರೊಂದಿಗೆ ಹುಟ್ಟುಹಾಕಿದ ಸಂಸ್ಥೆ ಮೂಲಕ ನವಯುವಕಲಾವಿದರನ್ನು ಬೆಳಕಿಗೆ ತರುವುದರಲ್ಲಿ ತುಂಬಾ ಶ್ರಮಿಸಿದ. ಮುಂಬೈ (ಮಾತುಂಗ) ಕರ್ನಾಟಕ ಸಂಘದ ಅಧ್ಯಕ್ಷನಾಗಿ ಹಲವಾರು ವರ್ಷ ಸೇವೆ ಸಲ್ಲಿಸಿದ್ದಾನೆ. ಎಂದಿನಂತೆ ಕನ್ನಡಿಗರ ಉಪೇಕ್ಷೆ ಅವನಿಗೆ ದೊರೆತ ಪ್ರತಿಫಲ!

– ಜ್ಯೋತ್ಸ್ನಾ ಕಾಮತ್, ಬೆಂಗಳೂರು

"ಜನಪದ ವಿಚಾರ"

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಕರ್ನಾಟಕದಲ್ಲಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯುಲ್ಲಿ ಸಂಭವಿಸುತ್ತಿರುವ ಸಮಾಜ ಹಿತ-ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote,
Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237